॥ ಶ್ರೀರಸ್ತು ॥

ಸಾವಿತ್ರಿಯ ಚರಿತ್ರೆ

೧ನೆಯ ಆಶ್ವಾಸ

ಭಾಮಿನೀ ಷಟ್ಪದಿ

ಶ್ರೀಗಿರೀಂದ್ರ ಸುತಾ ಸುಪುತ್ರನೆ
ನಾಗ ಸುರ ನರ ನುತ ಚರಿತ್ರನೆ
ಭೋಗಿಭೂಷ ಪ್ರೇಮಪಾತ್ರನೆ ಭೋಗ ಮೋಕ್ಷದನೆ ।
ಯೋಗಿಜನ ಹೃದಯಾಬ್ಜಮಿತ್ರನೆ
ನಾಗಗೋಚರ ಗುಣ ಪವಿತ್ರನೆ
ರಾಗದಿಂದಲಿ ಸಲಹು ಸನ್ಮತಿಯಿತ್ತು ಗಜಮುಖನೆ ॥

...ಗಿ ತಾರೂರಹ ಮಹೀಸುರ
ಪುರದಿ ಸಿಂಹಾಸನದಿ ಮಂಡಿಸಿ
ಪರಮ ಧರ್ಮದಿ ಪಾಲಿಸುತ ಕರ್ಣಾಟ ಜನಪದವ ।
ಮೆರೆಯುತಿರ್ಪನುದಾರನಾಶ್ರಿತ
...ಣ ಸುಗುಣಾಭರಣ ವಿದ್ಯಾ
...ರಧಿ ವರ್ಧನ ಚಂದ್ರ ಸುಯಶಸ್ಸಾಂದ್ರ ಚಾಮೇಂದ್ರ ॥ ೨

ಈ ಮಹೀವಲ್ಲಭಗೆ ತಾನು
ದ್ದಾಮ ಸನ್ನಿಧಿ ಸಚಿವನಾಗಿ ನಿ
ಕಾಮವೆನೆ ಲೋಕೋಪಕೃತಿಯೊಳು ನಿರತನೆಂದೆನಿಸಿ |
ಸೌಮನಸ್ಯವನಾಂತು ಸುಯಶಃ
ಕಾಮನಾಗಿರುತಿರ್ಪ ವಿದ್ವ
ತ್ರೇಮ ನರಸಿಂಹಾರ್ಯನಾಮಕ ಭೂಸುರೋತ್ತಮನು || ೩

ಬಾಲಿಕಾ ಜನಕವನಿತಲದೊಳು
ಮೇಲಿನಿಪ ಪತಿಭಕ್ತಿ ಮುಖ್ಯ ಸು
ಶೀಲಗಳ ಬೋಧಿಸುವ ಸಾವಿತ್ರಿಯ ಮಹಾಕಥೆಯ |
ಕೇಳಿದೊಡನೆಯೆ ಮನವು ಹಿಡಿಯುವ
ಪೋಲು ತಿಳಿಗನ್ನಡದ ನುಡಿಯೊಳು
ಪೇಳ ನೀವೆನ್ನುತ ಕರಂ ಪ್ರೋತ್ಸಾಹಪಡಿಸಲ್ಕೆ || ೪

ಆ ಮಹಾಭಾರತದೊಳಿಸೆವು
ದ್ದಾಮ ಪಾತಿವ್ರತ್ಯ ಸದ್ಗುಣ
ಧಾಮೆಯಹ ಸಾವಿತ್ರಿಯ ಮಹಾ ಪುಣ್ಯಚರಿತೆಯನು |
ಭಾಮಿನೀಷಟ್ಪದಿಗಳಿಂದಭಿ
ರಾಮವೆನೆ ಕನ್ನಡದಿ ಪೇಳ್ದನು
ಚಾಮನೃಪನಾಸ್ಥಾನಕವಿ ಬಸವಪ್ಪ ಶಾಸ್ತ್ರಿಯಿದ || ೫

ಆ ಯುಧಿಷ್ಠಿರ ನೃಪಗೆ ಮಾರ್ಕಂ
ಡೇಯ ಮುನಿ ಸಂಕ್ಷೇಪದಲಿ ರಾ
ಮಾಯಣವ ಪೇಳ್ದೊಡನೆ ಸಾವಿತ್ರಿಯ ಮಹಾಕಥೆಯ |
ಆಯತವೆನಲು ಪೇಳಿದನು ಕೇಳ್
ರಾಯ ನೀನೆಂದೆನುತ ವೈಶಂ
ಪಾಯನನು ಜನಮೇಜಯ ಕ್ಷಿತಿನಾಥಗಿಂತೆಂದ || ೬

ಕೇಳು ಧರ್ಮಜ ಮದ್ರದೇಶವ
ನಾಳುತಿರ್ದನದೊರ್ವನವನೀ
ಪಾಲ ಪುಂಗವನಶ್ವಪತಿಯೆಂದೆಂಬ ಪಾರ್ಥಿವನು ।
ಪೇಳಲೇನವನಖಿಲ ಸದ್ಗುಣ
ಶಾಲಿ ನೀತಿ ವಿಶಾರದನು ಸುವಿ
ಶಾಲ ಕೀರ್ತಿ ಪರೇಂಗಿತಜ್ಞನುದಾರ ಮತಿಯುತನು ॥ ೭

ಸತ್ಯಸಂಧ ಜಿತೇಂದ್ರಿಯನು ದು
ಷ್ಕೃತ್ಯ ವಿಮುಖನು ಬ್ರಾಹ್ಮಣಪ್ರಿಯ
ನತ್ಯಧಿಕ ವಿನಯಾನ್ವಿತನು ಲೋಕೋಪಕೃತಿ ರತನು ।
ನಿತ್ಯ ದೇವಾರ್ಚನಪರನು ಸಾ
ಹಿತ್ಯವಿದನಾ ನೃಪತಿ ಯೋಗ್ಯಾ
ಮಾತ್ಯರೊಡನವನಿಯನು ಪಾಲಿಸುತಿರ್ದನೊಲವಿನಲಿ ॥ ೮

ಕೇಳು ಜನಪತಿ ತನ್ನೃಪನ ಸತಿ
ಮಾಳವೀನಾಮದಲಿ ಮೆರೆವಳು
ಹೋಲಿಸಲು ಸೌಂದರ್ಯದೊಳು ಶ್ರೀದೇವಿಗೆಣೆಯುಹಳು ।
ಪೇಳಲಸದಳವವಳ ಗುಣವ ಸು
ಶೀಲೆ ಪತಿಗನುಕೂಲೆಯಾಶ್ರಿತ
ಪಾಲೆ ಗುಣಮಣಿಮಾಲೆ ಕರುಣಾವಾಲೆಯಾ ಲೋಲೆ ॥ ೯

ಜನಪ ಕೇಳಾ ಕಾಂತೆ ಮಕ್ಕಳು
ತನಗುದಿಸಲಿಲ್ಲೆಂದು ಚಿಂತಾ
ವನಧಿಯೊಳು ಮಿಗೆ ಮುಳಗಿಹುದನರಿದವನಿಪತಿ ತಾನು ।
ಇನಿಯಳನು ಬೆಸಗೊಂಡನೇತಕೆ
ಮನದ ದುಗಡವಿದೆಂದು ಬಳಿಕಾ
ವನಿತೆ ಕಂಬನಿದುಂಬಿ ನುಡಿದಳು ತನ್ನ ಪತಿಯೊಡನೆ ॥ ೧೦

ಭೂವಧೂ ವಲ್ಲಭನೆ ನಿನ್ನನು
ಕೈವಿಡಿದ ನನಗೇನು ಕೊರತೆ ಮ
ಹಾ ವಿಭವದೊಳು ಬಾಳ್ವೆನಾದೊಡಮೇನನುಸಿರ್ದಪೆನು ।
ಭೂಮಿನುತನಹ ಸುತನ ಪಡೆದು ಮ
ನೋವಿನೋದವನಾಂಪ ಪುಣ್ಯವ
ನಾವು ತರಲಿಲ್ಲೆನುತ ಕಂಬನಿದುಂಬಿದಳು ಕಾಂತೆ ॥ ೧೧

ತೂಗುದೊಟ್ಟಿಲೊಳಿಟ್ಟು ಮಗುವನು
ಜೋಗುಳವ ಪಾಡುತ್ತ ಮಲಗಿಸಿ
ರಾಗದಿಂ ಮನೆಗೆಲಸಗಳ ಮಾಳ್ಪನಿತರೊಳಗೆದ್ದು ।
ಕೋಗಿಲೆಯ ದನಿಯಣುಗನಳಲೊಡ
ನಾಗ ಬಂದೆಡೆಯೂಡಿ ನೇಹದಿ
ಸೋಗಿಲೊಳಗಿಟ್ಟಾಡಿಸುವಳೇಂ ಧನ್ಯಳೋ ಜಗದಿ ॥ ೧೨

ವನಜಗಂಧಿಯೆ ನಿನ್ನ ನುಡಿ ನಿಜ
ವಿನಿಯ ಹೀನನ ವಿದ್ಯೆಯುಂ ನಂ
ದನನ ಪಡೆಯದ ನರನ ಸಿರಿಯುಂ ಜಗದಿ ನಿಷ್ಫಲವು ।
ವನಿತೆ "ನಾಪುತ್ರಸ್ಯಗತಿ" ಯೆಂ
ದೆನುತೊರೆವುದಾಮ್ನಾಯವದರಿಂ
ತನಯರುದಿಸಲದೊಂದುಪಾಯವ ಪೇಳ್ವೆ ಕೇಳೆಂದ ॥ ೧೩

ಪರಮ ಸಾವಿತ್ರೀ ವ್ರತವನಾ
ಚರಿಸಿದರೆ ಸಂತಾನ ಲಾಭವು
ದೊರಕುವುದು ನಿಜವೆಂದು ಕೇಳ್ದಿಹೆ ನಾನು ಗುರುಮುಖದಿ ।
ವಿರಚಿಸುವೆನದ ಭಕ್ತಿಯಿಂದಲಿ
ತರುಣಿ ಕೇಳ್ ಸಾವಿತ್ರಿಯೇ ತಾಂ
ಕರುಣಿಸಳು ಸಂತತಿಯ ನೀಂ ಸಂತೈಸಿಕೊಳ್ಳೆಂದ ॥ ೧೪

ಅರಸ ಕೇಳೈ ಬಳಿಕಲಾ ಭೂ
ವರನಮಲ ಸುಬ್ರಹ್ಮಚರ್ಯದೊ
ಳಿರುತ ಕಲ್ಪೋಕ್ತ ಪ್ರಕಾರದೊಳುಕ್ತ ಕಾಲದೊಳು ।
ನಿರಶನವ್ರತದಿಂದ ಬಿಡದಾ
ಚರಿಸುತಿರ್ದನು ಲಕ್ಷಹೋಮವ
ನರರೆ ಸಾವಿತ್ರಿಯ ಕುರಿತು ಸಂತಾನಕಾಂಕ್ಷೆಯಲಿ ॥ ೧೫

ಆ ಮಹೀಪತಿ ತಪ್ಪದೀಪರಿ
ನೇಮದಿಂದಾಚರಿಸುತಿರೆ ಕೇಳ್
ಸೋಮ ಕುಲಜನೆ ಕಳೆದವೈ ಹದಿನೆಂಟು ವರುಷಗಳು ।
ಆ ಮಹಾಸಾವಿತ್ರಿ ಮೆಚ್ಚುತ
ಹೋಮ ಕುಂಡಾಂತರದೆ ತನ್ನಯ
ರಾಮಣೀಯಕವಾಂತ ರೂಪವ ತೋರಿದಳು ನೃಪಗೆ ॥ ೧೬

ಜಯ ಮಹಾಸಾವಿತ್ರಿ ಜಯ ಜಯ
ಜಯ ಜಗಜ್ಜನಯಿತ್ರಿ ಜಯ ಜಯ
ಜಯ ಮನೋರಥಧಾತ್ರಿ ಜಯ ಜಯ ಭಜಕಜನ ಧಾತ್ರಿ ।
ಜಯ ಜಯ ಮಹಾದೇವಿ ನಿನ್ನಂ
ಘ್ರಿಯನು ಕಂಡು ಕೃತಾರ್ಥನಾದೆನು
ಭಯ ನಿವಾರಿಣಿ ಪಾಲಿಸೆಂದೆರಗಿದನು ಭಕ್ತಿಯಲಿ ॥ ೧೭

ಮೆಚ್ಚಿದೆನು ನೃಪತಿಲಕ ನಿನ್ನಯ
ಸಚ್ಚರಿತ ಸುಬ್ರಹ್ಮಚರ್ಯಕೆ
ನಿಚ್ಚಲುಂ ನೀಂ ನಡಸಿದೀ ಜಪ ಹೋಮ ದಾನಕ್ಕೆ ।
ಮೆಚ್ಚಿದೆನು ಬೇಕಾದ ವರಗಳ
ನುಚ್ಚರಿಸು ನಾಂ ಕೊಡುವೆನೆನೆ ಕೇ
ಳ್ದಚ್ಚರಿಯ ತಾಳುತ್ತಲಾ ನೃಪನೆರಗಿ ತತ್ಪದಕೆ ॥ ೧೮

ತಾಯೆ ಸಂತಾನವೆ ಮನುಷ್ಯ ನಿ
ಕಾಯಕಿಹ ಪರಗಳಲಿ ವಿಪುಲ
ಶ್ರೇಯವನು ಮಾಡುವುದೆನುತ ಮುನಿವರರು ನುಡಿವುದರಿಂ ।
ಈಯಬೇಕಾ ಬಹು ಸುತರ ಮುನಿ
ಗೇಯೆ ನೀಂ ದಯೆಯಿಂದಲೆನ್ನನು
ಕಾಯಬೇಕೆಂದೆರಗಿದನು ಸಾವಿತ್ರಿಯಡಿಗಳಿಗೆ ॥ ೧೯

ಎಲೆ ನೃಪತಿ ನಿನ್ನಿಷ್ಟವನು ನಾಂ
ತಿಳಿದಿರುವೆನ್ನೈ ಕೇಳು ನಿನ್ನಯ
ಲಲನೆಯುದರದೊಳೊಂದು ಕನ್ಯಾರತ್ನವುದಿಸುವುದು ।
ಸಲಿಸಿರುವೆನೀ ವರವ ಮನದೊಳು
ಕಳವಳಿಸಬೇಡೆಂದು ನುಡಿದಾ
ಬಳಿಕಲಂತರ್ಧಾನವನು ಹೊಂದಿದಳು ಸಾವಿತ್ರಿ ॥ ೨೦

ವರ ಯುಧಿಷ್ಠಿರ ನೃಪತಿ ಕೇಳೀ
ಪರಿ ವರವ ಪಡೆದಶ್ವಪತಿ ಬಲು
ಹರುಷದಿಂದಂತಃಪುರವನೊಳಹೊಕ್ಕು ಕಾಂತೆಯೊಳು ।
ವರದ ಪರಿಯನು ತಿಳುಹಿ ಧರ್ಮದಿ
ಧರಣಿಯನು ಪರಿಪಾಲಿಸುತ ತಾ
ನಿರಲತಿಕ್ರಮಿಸಿದುವು ಕೆಲವು ದಿನಂಗಳಾ ಬಳಿಕ ॥ ೨೧

ಧರಿಸಿದಳು ಗರ್ಭವನು ತದ್ಭೂ
ವರನ ಸತಿ ಸಿತಪಕ್ಷಚಂದ್ರನ
ತೆರದಿ ಗರ್ಭವು ದಿನದಿನಕ್ಕಭಿವೃದ್ಧಿಯನು ಪಡೆಯೆ ॥
ಹರಿಸ ಮಿಗೆ ನವಮಾಸ ತುಂಬಲು
ಶರಧಿಯೊಳು ಸಿರಿ ಜನಿಸಿದಂತಾ
ಅರಸಿಯುದರದಿ ಹೆಣ್ಣು ಮಗು ಹುಟ್ಟಿತು ಸುಲಗ್ನದಲಿ ॥ ೨೨

ಎಲೆ ನೃಪತಿ ಕೇಳಶ್ವಪತಿಯಾ
ಬಳಿಕ ಸಾವಿತ್ರಿಯು ವರದಿ ನಿಜ
ಕುಲದೊಳುದಿಸಿದ ಪುಣ್ಯಲಕ್ಷಣ ಕನ್ಯಕಾಮಣಿಗೆ ।
ಬೆಳಸಿ ಮುದದಿಂ ಜಾತ ಕರ್ಮವ
ನಲವಿನಿಂ ಸಾವಿತ್ರಿಯೆಂದೇ
ಲಲನೆಯಿಂದೊಡಗೂಡಿ ಗೆಯ್ವನು ನಾಮಕರಣವನು ॥ ೨೩

ನಗೆ ಮೊಗದ ತೊಳಗುವ ಕಪೋಲದ
ಚಿಗುರನಣಕಿಪ ಕರತಳದ ಸಂ
ಪಗೆಯ ಪೋಲುವ ನಾಸಿಕದ ಪೊಗರುಗುವ ಚೆಂದುಟಿಯ ।
ಬೊಗಸೆಗಣ್ಣಿನ ತುಂಬಿಗುರುಳಿನ
ಮಗಳ ಚೆಲುವಿಕೆಯನು ನಿರೀಕ್ಷಿಸಿ
ಬಗೆಯೊಳಾನಂದಿಪರು ಜನನೀ ಜನಕರಡಿಗಡಿಗೆ ॥ ೨೪

ನೋಡಿ ದಣಿಯರು ಮಗಳ ಸಿಂಗರ
ಮಾಡಿ ದಣಿಯರು ನೇಹ ಮಿಗೆ ಮು
ದ್ದಾಡಿ ದಣಿಯರು ಮನದೊಳಡಿಗಡಿಗಣುಗಿ ಬೇಡಿಪುದ ।
ನೀಡಿ ದಣಿಯರು ನಿಚ್ಚಲವಳೊಡ
ನಾಡಿ ದಣಿಯರು ಹರುಷಗಡಲೊಳು
ಮೂಡಿ ಮುಳುಗುವರವರು ಜನನೀ ಜನಕರನವರತ ॥ ೨೫

ಬಾಲೆ ಬಾಲೇಂದುವಿನ ತೆರದೊಳು
ತಾಳುತಿರಲಭಿವೃದ್ಧಿಯನು ಭೂ
ಪಾಲನಖಿಲ ಕಳೆಯನರಿದುಪಾಧ್ಯಾಯನನು ಬರಿಸಿ ।
ಮೇಲೆನಿಪ ಮನ್ನಣೆಯ ಮಾಡಿ ವಿ
ಶಾಲ ಮತಿಗಳೆ ನಮ್ಮ ಕುವರಿಗೆ
ಪೇಳುವುದು ವಿದ್ಯೆಯನೆನುತ್ತಾತ್ಮಜೆಯೊಳಿಂತೆಂದ ॥ ೨೬

ಜನನಿಯಂದದಿ ಪೋಷಿಸುವುದಾ
ಜನಕನಂದದಿ ವಿಹಿತ ಕಾರ್ಯದೊ
ಳನುಗೊಳಿಸುವುದು ಮಿತ್ರನೋಲ್ ದುಃಖವನು ಪರಿಹರಿಸಿ |
ಮನವ ಸಂತೋಷಿಪುದು ಕೀರ್ತಿಯ
ಜನಿಯಿಪುದು ಸಂಪದವನೀವುದು
ತನುಜೆ ಕೇಳೌ ವಿದ್ಯೆ ಸಾಕ್ಷಾತ್ಕಲ್ಪಲತೆಯೆಂದ || ೨೭

ತರಳೆ ಕೇಳ್ ನಿನಗಿವರು ವಿದ್ಯಾ
ಗುರುಗಳಿವರ್ಗೆ ವಿನೀತೆಯಾಗಿವ
ರೊರೆದ ವಿದ್ಯಾಬುದ್ಧಿಗಳ ಕಲಿತೊಂದು ವೇಳೆಯಲಿ |
ಗುರುಗಳಾಗ್ರಹಿಸಿದರೆ ನನಗಿದು
ಪರತರಾನುಗ್ರಹವೆನುತ ನೀ
ನರಿದು ನಡೆಯೆನು ತೆರಗಿಸಿದನಾಚಾರ್ಯಗಾತ್ಮಜೆಯ|| ೨೮

ಹೇಳಿದನುಪಾಧ್ಯಾಯನಾ ನೃಪ
ಬಾಲಿಗನುನಯದಿಂದ ವಿದ್ಯೆಯ
ಪೇಳಲರಿದವಳುರುತರ ಪ್ರತಿಭಾ ವಿಶೇಷವನು |
ಕೇಳಿದೊಡನೆಯೆ ಬಹುದು ಗುರು ತಾಂ
ಹೇಳಿಕೊಡುತಿಹ ವಿದ್ಯೆಯಾಕೆಯ
ಮೇಲುಮತಿಗಾಚಾರ್ಯನಚ್ಚರಿಪಡುವನಡಿಗಡಿಗೆ || ೨೯

ಗುರುಗಳುಸಿರಿದ ಪಾಠವನು ತಾಂ
ಪರಮ ಭಕ್ತಿಯೊಳಾಲಿಸುವಳಾ
ದರದಿ ಪಠಿಪಳು ಮನದೊಳದನಡಿಗಡಿಗೆ ಭಾವಿಪಳು |
ಪರಿಪರಿಯ ಬಾಲ್ಯೋಚಿತಕ್ರಿಯೆ
ಗೆರಗುತಿಹ ಮನವನ್ನು ಬಲುಹಿಂ
ತಿರುಗಿಪಳು ವಿದ್ಯೆಯೊಳು ವರಗುಣೆಯಾದ ಸಾವಿತ್ರಿ || ೩೦

ಮನದಿ ವಿದ್ಯಾಗುರುಗಳನು ನಿಜ
ಜನಕನಂದದಿ ಭಾವಿಸುತ ಬಲು
ವಿನಯದಿಂದಲಿ ನಡೆದಳಾಜ್ಞೆಯ ಮೀರದಿಹಳವರ |
ಇನಿಸು ಬೇಸರಪಡದೆ ವಿದ್ಯೆಯ
ನನುದಿನವು ಕಲಿಯುತ್ತಲಿರ್ದಳು
ಘನಗುಣಾನ್ವಿತೆಯಾದ ತನ್ನೃಪ ಪುತ್ರಿ ಸಾವಿತ್ರಿ || ೩೧

ಕೇಳು ನೃಪ ಸಾಹಿತ್ಯ ಮೊದಲಾ
ದಾ ಲಲಿತ ವಿದ್ಯೆಗಳ ಕಲಿತಳು
ಮೇಲೆನಿಪ ನಿಜ ಕೌಶಲಕೆ ಗುರು ಮೆಚ್ಚುವಂದದಲಿ |
ಬಾಲೆ ವಿದ್ಯಾ ನಿಪುಣೆಯಾದುದ
ಕೇಳುತವಳ ಪರೀಕ್ಷಿಸುತ ಮಿಗೆ
ತಾಳಿದನು ಸಂತೋಷವನು ತಜ್ಜನಕನಡಿಗಡಿಗೆ || ೩೨

ಧರಿಸಿದಳು ಯೌವನವನವಳದ
ನೊರೆವುದಿನ್ನೇಂ ವದನ ವರಿಸೆಂ
ದೊರೆವುವೆನೆ ಶೋಭಿಸಿದುವಾಕರ್ಣಾಯತಾಕ್ಷಿಗಳು |
ವರ ಮಣಿಗಳನು ಕುಂದಣದಿ ಬಿಗಿ
ದಿರಿಸಿದಂತಾಯ್ತವಯವದ ಭಾ
ಸುರತೆಯೇರುಂಜಪ್ಪನದಿ ತರುಣೀ ಶಿರೋಮಣಿಯಾ || ೩೩

ರತಿಯ ಸುವಿಲಾಸಗಳನಾ ಭಾ
ರತಿಯ ವಾಕ್ಚತುರತೆಯನಾ ಹರಿ
ಸತಿಯ ಸೌಭಾಗ್ಯವನು ನೆರೆ ಹೋಲುವುವು ನೃಪಸುತೆಯ |
ಅತಿಶಯಿತ ಸುವಿಲಾಸ ಸರಸೋ
ಚಿತ ವಚನ ಸೌಭಾಗ್ಯಗಳು ತ
ತ್ಸತಿಯನೇಂ ವರ್ಣಿಸುವೆನೈ ಭೂಪಾಲ ಕೇಳೆಂದ | ೩೪

ತವಕ ದಿಂದಲು ತನಕ ಹಿಂಗೆ ಬಂ
ದವನಿಪಾಲ ಕುಮಾರರೀಕ್ಷಿಸು
ತವಳವನಿಗನಿತಂದ ನಿರ್ಜರ ಯುವತಿಯೋ ರತಿಯೋ |
ಇವಳು ಸಾಕ್ಷಾಲ್ಲಕ್ಷ್ಮಿಯೋ ಮೇಣ್
ವಿವರಿಸುವಡರಿದೆಂದು ಮನದೊಳು
ತವತವಗೆ ಬೆರಗಾಗುತಿರ್ದರು ಜನಪ ಕೇಳೆಂದ || ೨೫

ಅರಸ ಕೇಳಾ ನೃಪಕುಮಾರರು
ತರಣಿಕೋಟಿ ಸಮಾನ ತೇಜರು
ಮರುಗುತಿಹ ಸಾವಿತ್ರಿಯಿರವನು ನೋಡಿ ಬೆರಗಾಗಿ |
ಪರಮರಾ ನಾರೀ ವಧೂಟಿಯು
ವರಿಸುವುದಕೆ ಸಮರ್ಥರಲ್ಲೆಂ
ದಿರದೆ ತಂತಮ್ಮೂರಿಗೆಯ್ದಿದರಂದು ಮೌನದಲಿ || ೨೬

ಬಂದು ಬಂದೈದುತಿರೆ ನೃಪಸುತ
ವೃಂದವಾ ಕನ್ಯಾಶಿರೋಮಣಿ
ಯೊಂದಿಗೆನಗನುರೂಪ ವರ ದೊರಕುವನೊ ತಾನೆನುತ |
ಮಂದಗಮನೆ ಸಹುತಿರಲು ಬಳಿಕಲಿ
ಸಂಧಿಸಲು ವರ ಪರ್ವಕಾಲವು
ಬಂದು ಭಕ್ತಿಯೊಳಿಷ್ಟದೇವತೆಯರ್ಚನೆಯನೆಸಗಿ || ೨೭

ಬಂದನಾನಂತರದೊಳಾ ನೃಪ
ನಂದನೆಯು ದೇವಪ್ರಸಾದವ
ನೊಂದು ತಟ್ಟೆಯೊಳಿರಿಸಿಕೊಂಡತಿಭಕ್ತಿಯೊಳು ತನ್ನ |
ತಂದೆಯೆಡೆಗೆಯ್ತಂದು ಚರಣಕೆ
ವಂದಿಸುತಲೀ ಸುಪ್ರಸಾದವ
ತಂದಿಕ್ಕೆ ಕೊಳ್ಳೆನುತ ನೃಪಸುತ ಕೈಗಿತ್ತು ನಿಂದಿರಲು || ೨೮

ವಿನಯದಿಂ ತಲೆವಾಗಿ ತನ್ನಯ
ಸನಿಹದೊಳು ನಿಂತಿರುವ ನವ ಯೌ
ವನ ವಿಲಾಸ ಮನೋಜ್ಞೆಯಾಗಿಹ ಮಗಳನೀಕ್ಷಿಸುತ ।
ತನುಜೆ ಬಾ ಸುದ್ವಂತ ವಾರಿಧಿ
ಜನಿತ ಲಕ್ಷ್ಮಿಯೆ ಬಾರೆನುತ ಲೋ
ಚನ ಸುಬಾಷ್ಪಗಳಿಂದಲಭಿಷೇಕಿಸಿದನಾತ್ಮಜೆಯ ॥ ೩೯

ಸೊಕ್ಕು ಜವ್ವನೆಯಾದಳಾಗಿಯು
ತಕ್ಕವರನಾವನನು ವರಿಸುವ
ಳಕ್ಕಟಾ ಪಗ್ಗೆಯ್ವ ನೆನ್ನುತ ತನ್ನ ಮನದೊಳಗೆ ।
ಕಕ್ಕುಲಿತೆಯನು ಪಡೆದು ಕುವರಿಯ
ನಕ್ಕರಿಂದಲಿ ನೋಡಿ ಮನದೊಳ
ಪೊಕ್ಕಭಿಪ್ರಾಯವನು ಪೇಳಿದನಪ್ಪನತಿ ಸುತೆಗೆ ॥ ೪೦

ಎಲೆ ಮಗಳೆ ! ಕುಲ ಶೀಲ ರೂಪಂ
ಗಳಲಿ ನಿನಗನುರೂಪ ವರನನು
ನೆಲದೊಳರಸುತಿಹ ನೃಪಕುಮಾರರೊಳರಸುತಲಿ ನೀನೆ ।
ತಿಳಿಪಿದೊಡೆ ನಿನ್ನಾರಯುವ ನಾಂ
ಬಳಿಕವನ ಪರಿಯನು ವಿಚಾರಿಸಿ
ಕುಲಮಣಿಯೊಳು ಪರಿಣಯವ ಮಾಡುವೆ ನಿನಗೆ ನಾನೆಂದ ॥ ೪೧

ಇದನು ನೀಂ ಮಾಡಿದರೆ ನಾಂ ಲೋ
ಕದೊಳು ನಿಂದೆಗೆ ಗುರಿಯಹೆನು ಕೇ
ಳುದಿತ ಯೌವನ ಸುತಗೆ ಮದುವೆಯ ಮಾಡದಿಹ ಪಿತನು ।
ಮದುವೆಯಾದಂಗನೆಯ ಕಾಪಾ
ಡದ ಪತಿಯು ಪತಿಯಳಿದ ತಾಯನು
ಮುದದಿ ಸಲಹದ ಸುತನು ನಿಂದ್ಯರು ಮೂವರಿವರೆಂದು ॥ ೪೨

ಸೊಲ್ಲಿಸರು ಕೇಳ್ ಧರ್ಮ ಶಾಸ್ತ್ರವ
ಬಲ್ಲ ವಿಬುಧೋತ್ತಮರು ನೀನಿದ
ನೆಲ್ಲವನು ತಿಳಿದಿರ್ಪೆ ವಿದ್ಯಾವತಿಯಲಾ ನೀನು ।
ಸಲ್ಲಲಿತ ಗುಣೆ ತಕ್ಕ ಧರಣೀ
ವಲ್ಲಭ ಕುಮಾರನ ವರಿಸಿ ಜಗ
ದಲ್ಲಿನಗೆ ಬರ ನಿಂದೆಯನು ತಪ್ಪಿಸುವುದೆಂದೆನುತ ॥ ೪೩

ಜನಪ ತನ್ನಯ ವೃದ್ಧಮಂತ್ರಿಗ
ಳನು ಕರೆದು ಮಗಳೊಡನೆ ಪೋಗುವು
ದೆನುತಲಾಜ್ಞೆಯನಿತ್ತು ವರನನು ಹುಡುಕೆ ನಿಜ ಸುತೆಯ ।
ಕನಕ ರಥದೊಳು ಕುಳ್ಳಿರಿಸಿ ಪರಿ
ಜನದೊಡನೆ ಬೀಳ್ಕೊಡಲು ತನ್ನಯ
ಜನಕನಂಘ್ರಿಗೆ ನಮಿಸಿ ಗಮಿಸಿದಳಂದು ಸಾವಿತ್ರಿ ॥ ೪೪

ಎಲ್ಲಿ ರಾಜರ್ಷಿಗಳು ವಾಸಿಪ
ಸಲ್ಲಲಿತ ಪುಣ್ಯಾಶ್ರಮಂಗಳು
ಎಲ್ಲಿ ಪಾವನತರ ತಪೋವನಸೊಪ್ಪುತಿರುತಿಹುವೊ ।
ಅಲ್ಲಿಗಲ್ಲಿಗೆ ಪೋಗಿ ತೀರ್ಥಗ
ಳಲ್ಲಿ ಮುಳುಗಿ ಮಹರ್ಷಿಗಳ ಪದ
ಪಲ್ಲವಕ್ಕಭಿನಮಿಸುತಾಶೀರ್ವಾದ ಪಡೆಯುತಾಂತು ॥ ೪೫

ಪುಣ್ಯ ತೀರ್ಥಕ್ಷೇತ್ರದೆಡೆಯೊಳ
ಗಣ್ಯಮೆನೆ ರತ್ನಾಂಬರಾದಿ ಹಿ
ರಣ್ಯಗಳನಾಶ್ರಮನಿವಾಸಿ ಬ್ರಾಹ್ಮಣರ್ಗಿತ್ತು ।
ಗಣ್ಯರಾದವನಿಪಕುಮಾರ ವ
ರೇಣ್ಯರೊಳು ತಕ್ಕವನನಾ ಲಾ
ವಣ್ಯನಿಧಿಯರಸುತ್ತ ಸಂಚರಿಸಿದಳು ಸಾವಿತ್ರಿ ॥ ೪೬

೨ನೆಯ ಆಶ್ವಾಸ

ಸೂಚನೆ || ಮನದಿ ವರಿಸಿದ ಸತ್ಯವಂತನೆ
ತನಗೆ ಪತಿಯೆಂದೆಂಬ ನಿಜಸುತೆ
ಯೆನುಮತದೊಳಾತಂಗೆ ಮದುವೆಯ ಗೆಯ್ದನಶ್ವಪತಿ ||

ಇಂದುಕುಲ ಭೂಷಣನೆ ನೀಂ ಕೇ
ಳೊಂದು ದಿನವಾ ಅಶ್ವಪತಿ ನೃಪ
ನಂದದಿಂದೊಡ್ಡೋಲಗದೊಳಿರುತಿರ್ಪ ಸಮಯದಲಿ |
ಬಂದನಲ್ಲಿಗೆ ವೀಣೆಯನು ನಲ
ವಿಂದ ನುಡಿಸುತಲಂಬರಸ್ಥಲ
ದಿಂದಬರುತಿಹ ಶುಭ್ರನೀರದನೆನಲು ನಾರದನು ೧

ಕಂಡು ತನ್ನಾಸನವನಾ ಭೂ
ಮಂಡಲಾಧಿಪನೆದ್ದು ತತ್ಪದ
ಪುಂಡರೀಕಕ್ಕೆರಗಿ ಪೀಠವನಿತ್ತು ಸತ್ಕರಿಸಿ |
ಮಂಡಿಸಿದುದೆನ್ನೃಪ ನಿಕರವಾ
ಮಂಡಲಾರ್ಚಿತ ನಿಮ್ಮ ಚರಣವ
ಕಂಡುದರಿನೆಂದರಸ ನುಡಿದನು ವಿನಯ ವಚನದಲಿ || ೨

ಆ ಸಮಯದಲಿ ಬಂದಳೊಡನೆ ಮ
ಹಾ ಸಚಿವರ್ಕೈತರಲು ಪುಣ್ಯಾ
ವಾಸವೆನಿಪ ತಪೋವನಂಗಳ ಚರಿಸಿ ಸಾವಿತ್ರಿ |
ಲೇಸುಮಿಗೆ ಮುನಿಪತಿಯೊಡನೆ ಭ
ದ್ರಾಸನದಿ ಕುಳಿತಿರ್ಪ ತಂದೆಯ
ಭಾಸುರಾಂಗಿ ನಿರೀಕ್ಷಿಸುತ ವಂದಿಸಿದಳೀರ್ವರಿಗೆ || ೩

ಎರಗಿದಾ ಸಾವಿತ್ರಿಯನು ಮುನಿ
ವರಸುತೆಗೆ ಜನನಾಥ ನಿನ್ನಯ
ತರಳೆ ತಾಂ ಪೋಗಿರ್ದಳಿಲ್ಲಿಗೆ ಬಂದಳಿಲ್ಲಿಂದ ।
ಅರಸು ಯೌವನವಾಂತ ಕನ್ಯೆಗೆ
ವರನ ನೋಡಿ ವಿವಾಹವನು ನೀಂ
ವಿರಚಿಸದ ಕಾರಣವದೇನೆಂದೆನುತ ಬೆಸಗೊಂಡ ॥ ೪

ಸುರಮುನಿಪ ಲಾಲಿಸು ಮಹಾಜ್ಞೆಯ
ಧರಿಸಿ ಶಿರದೊಳು ತಕ್ಕ ವರನನು
ವರಿಸುವೊಡೆ ಪೋಗಿರ್ದಳೀಗಳೆ ಬಂದಳಿನ್ನೆಡೆಗೆ ।
ತರಳೆಯನೆ ಕೇಳುತ್ತ ತಿಳಿವೆವು
ತೆರನನೆಲ್ಲವನೆನುತಲಾ ಭೂ
ವರನು ಮನದನುರಾಗ ದಿಂಗೆ ಬೆಸಗೊಂಡನಾತ್ಮಜೆಯ ॥ ೫

ಎಲೆ ಮಗಳೆ ನೀಂ ಪೋಗಿ ಬಂದುದ
ತಿಳುಹೆನಲು ನಿಜಪಿತನ ವಾಕ್ಯಂ
ಗಳನು ಸಾಕ್ಷಾದ್ದೇವತಾ ವಾಕ್ಯಂಗಳೆಂದೆಣಿಸಿ ।
ಬಲುವಿನಯದಿಂ ಬಾಗಿ ಕನ್ಯಾ
ಕುಲ ಶಿರೋಮಣಿ ಬಿನ್ನವಿಸಿದಳು
ಬಳಿಯೊಳಿಹ ಮುನಿವರನು ಸಂತಸಗೊಳಲು ನಿಜಪಿತಗೆ ॥ ೬

ಪಿತನೆ ಲಾಲಿಸು ಸಾಲ್ವ ದೇಶಕೆ
ಗತಿ ಮಹಾ ಸತ್ಯಾತ್ಮ ಸದ್ಗುಣ
ಯುತನು ಧರ್ಮಜ್ಞ ದ್ಯುಮತ್ಸೇನಾಖ್ಯ ಪಾರ್ಥಿವನು ।
ಗತ ನಯನನಾಗಲ್ಕೆ ರಾಜ್ಯ
ಚ್ಯುತಿಯು ಹಗೆಯಿಂದಾಗೆ ಬಳಿಕಾ
ಕ್ಷಿತಿಪನಂಗನೆಗೂಡಿ ನಿಜ ಬಾಲಕನನೊಡಗೊಂಡು ॥ ೭

ವರ ತಪೋವನಕೆಯ್ದಿ ತಪವನು
ವಿರಚಿಸುತ್ತಿಹನವನ ಸುತನನ
ವರತ ಋಷ್ಯಾಶ್ರಮದಲಭಿವೃದ್ಧಿಯನು ಹೊಂದುತ್ತ ।
ಮೆರೆವನಾತನು ಹೆಸರಿನೊಳು ತ
ನ್ನಿರುವಿಕೆಯೊಳುಂ ಸತ್ಯವಂತನು
ವರಿಸಿರುವೆ ನಾನವನ ಮನದೊಳಗೆಂದಳೊಲವಿನಲಿ ॥ ೮

ಅಂದು ಜನಪತಿ ಮುನಿಯ ನೋಡ
ಲ್ಕೆಂದನೆಲೆ ಜನಪಾಲ ನಿನ್ನಯ
ನಂದನೆಯು ಪೇಳ್ದ ದ್ಯುಮತ್ಸೇನಾಖ್ಯ ಪಾರ್ಥಿವನು ।
ಎಂದುಮನುಪಮ ಸತ್ಯರತನವ
ರಿಂದಲಿಟ್ಟನು ನಂದನಂಗಾ
ನಂದದಲಿ ಶ್ರೀ ಸತ್ಯವಂತನೆನುತ್ತ ನಾಮವನು ॥ ೯

ಅರಸ ಕೇಳಾ ಸತ್ಯವಂತನು
ಹರುಷದಿಂ ತುರಗಗಳ ಮಣ್ಣೊಳು
ವಿರಚಿಸುತ ಚಿತ್ರಂಗಳೊಳಗುಂ ಬರೆಯುತಾಡುತಿರೆ ।
ಪರಮ ಋಷಿಗಳು ನೋಡುತಾತನ
ಕರೆದರ್ ಚಿತ್ರಾಶ್ವನೆನ್ನುತ
ಲಿರಲು ನಾಮಗಳವನಿಗಾಯ್ತು ಜಗದೊಳದರಿಂದ ॥ ೧೦

ಮುನಿವರನೆ ವಿವರಿಸುವುದೆನಗಾ
ತನ ವಯೋರೂಪಂಗಳನು ಮೇ
ಣಿನಿಸು ಬಿಡದಾತನೊಳಗಿಹ ಗುಣದೋಷವೆಲ್ಲವನು ।
ಘನ ಮಹಿಮ ಬೆಸಗೊಂಬೆನೆನ್ನಯ
ತನುಜೆಗಾತನು ತಕ್ಕ ವರನೇ
ಎನಲು ನೃಪತಿಗೆ ನಾರದ ಮಹಾಮುನಿಪನಿಂತೆಂದ ॥ ೧೧

ಜನಪ ಕೇಳಾ ಸತ್ಯವಂತನು
ಘನತರೋಜ್ವಲ ರೂಪ ನವ ಯೌ
ವನ ವಿಲಾಸ ಮನೋಹರಾಂಗನು ಸಕಲ ಗುಣಯುತನು ।
ಮುನಿ ನಿಕರ ಶಿಕ್ಷಿತನು ವಿದ್ಯಾ
ವಿನಯ ವಿತರಣಶಾಲಿ ಜನನೀ
ಜನಕ ಸೇವಾನಿರತನಮಲ ಚರಿತ್ರಯುತನೆಂದ ॥ ೧೨

ಅತ ಸಾಂಕೃತಿ ರಂತಿದೇವ ಯ
ಯಾತಿಗಳಿಗೆಣೆಯೆನಿಪನತಿ ವಿ
ಖ್ಯಾತ ಶೌರ್ಯೌದಾರ್ಯ ಗಾಂಭೀರ್ಯಾದಿ ಗುಣಗಳಲಿ ।
ಭೂತದಯೆಯುಳ್ಳವನು ಸುಮತಿ ವಿ
ನೀತ ತೇಜೋರಾಶಿ ಸಾಧು
ಪ್ರೀತನತುಲಿತ ಸತ್ಯ ಶೌಚಾಚಾರಯುತನೆಂದ ॥ ೧೩

ಮೇದಿನೀಪತಿ ಕೇಳು ಸಕಲ ಗು
ಣೋದಧಿಯು ನಿಜವವನು ಲೋಕದೊ
ಳಾದರವನೊಳಗೊಂದು ಕೊರತೆಯದಿರ್ಪುದೇನೆಂಬೆ ।
ಈ ದಿವಸ ಮೊದಲೊಂದು ವರ್ಷ
ಕ್ಕೈದುವುದು ಮೃತಿಯವಗೆನಲ್ಕೆ ವಿ
ಷಾದವಾಂತಾ ನೃಪತಿ ತನ್ನಯ ಸುತೆಯೊಳಿಂತೆಂದ ॥ ೧೪

ಎಲೆ ಮಗಳೆ ನೀನೊಪ್ಪಿದಾತನು
ಕುಲ ವಯೋರೂಪಾದಿ ಸುಗುಣಂ
ಗಳಲಿ ನಿನಗನುರೂಪನಾದರು ಒಂದು ವರ್ಷಕ್ಕೆ ।
ಅಳಿವನೆನ್ನುತ ಪೇಳ್ವರಿವರೆಂ
ತಳಿಯನಂ ನಾಂ ಮಾಡಿಕೊಳ್ಳುವೆ
ನುಳಿದವನ ನಿಶ್ಚೈಸಿ ವರವನು ವರಿಸು ನೀನೆಂದ ॥ ೧೫

ಸುಗುಣಿಯಾಗಲಿ ದೋಷಿಯಾಗಲಿ
ಬಗೆಯೆ ಪೂರ್ಣಾಯುಷ್ಯನಾಗಲಿ
ಮಗುಳವಂ ಕ್ಷೀಣಾಯುವಾಗಲಿ ಸತ್ಯವಂತನನು |
ಬಗೆಯೊಳಾಂ ವರಿಸಿರುವೆನಾತನೆ
ಜಗದೊಳೆನ್ನಯ ಪತಿಯು ಶಿಕ್ಷಿಪ
ರುಗಳು ನಿಮಗೆ ಸಮಾನರೆಂದಳು ನಯದಿ ಸಾವಿತ್ರಿ || ೧೨

ಮಾನನಿಧಿ ಮತ್ಪಿತನೆ ಕನ್ಯಾ
ದಾನವನು ಮೇಣ್ ಧನ ವಿಭಾಗವ
ಮಾನವರು ತಾನೊಮ್ಮೆ ಮಾಳ್ಪುದು ಧರ್ಮಪದ್ಧತಿಯು |
ಏನುಚಿತವೆ ನಿಮ್ಮಾಜ್ಞೆಯಿಂದಲೆ
ನಾನವನ ವರಿಸಿಹೆನು ಮನದೊಳ
ಗೀ ವಿಧಿಯೊಳೆನಗವನೆ ಪತಿಯೆಂದುನಿರ್ಣಯಿಸಿದುದುಮುದಿ] ೧೩

ಪ್ರಜಾಪತಿ ಕೇಳ್ ನಿನ್ನ ಪುತ್ರಿಯು
ದೃಢಮತಿಯು ಮೇಣ್ ಧರ್ಮಚಾರಿಣಿ
ನುಡಿವುದೇನೆಮಗಿವಳ ಮನವನು ತಿರುಗಿಪುದು ಕಷ್ಟ |
ಕೊಡುವುದಿವಳನು ಸತ್ಯವಂತಗೆ
ಪಡಿಯೆನಿಸುವರಿನ್ನಿರ್ವರಿಲ್ಲೈ
ನೃಪನ ಕೃಪೆಯಿನ್ನಂತೆಯಾಗಲೆನುತ್ತ ಮುನಿ ನುಡಿದ || ೧೪

ಮುನಿಪ ನಿಮ್ಮಾಜ್ಞೆಯೊಳಗಾತಗೆ
ತನುಭವೆಯ ಪರಿಣಯವ ಮಾಡುವೆ
ನೆನೆ ನೃಪನು ತನ ಸುತೆಯ ಮದುವೆ ನಿರಂತರಾಯದಲಿ |
ಅನುಗೊಳಲಿ ಸುಖವಾಗಿರೆಂದಾ
ಜನಪನನು ಸಾವಿತ್ರಿಯನು ತ
ನ್ನುಸಿರ ಪರಸುತ ಸತ್ಯಲೋಕಕೆ ತೆರಳ್ದನೊಲವಿನಲಿ || ೧೫

ಬಳಿಕಲಾ ನೃಪ ಕರೆದು ಸಚಿವ
ರ್ಗಳಿಗೆ ನಾವಿನ್ನೆಮ್ಮ ಕುವರಿಗೆ
ಬೆಳೆಸಬೇಕು ವಿವಾಹವನು ಬೇಕಾದ ವಸ್ತುಗಳ |
ಚಳಕದಿಂದನುಗೊಳಿಸಿ ನೀವೆಂ
ದೊಲವಿನಿಂದಲಿ ಪೇಳ್ದು ತನ್ನಯ
ಲಲನೆಗುಸಿರಲು ಪೊಕ್ಕನಂತಃಪುರವ ಕೇಳೆಂದ || ೨೦

೩ನೆಯ ಆಶ್ವಾಸ

ಸೂಚನೆ || ಮುದದಿ ವರಗುಣೆ ಸತ್ಯವಂತನ
ಮದುವೆಯಾಗಿ ಸುಭಕ್ತಿಯಿಂ ಪತಿ
ಪದವ ಸೇವಿಸುತಿರ್ದಳಾ ಸುಚರಿತ್ರೆ ಸಾವಿತ್ರಿ ||

ಕೇಳು ಧರ್ಮಜ ಬಳಿಕಲಾ ಭೂ
ಪಾಲ ಮದುವೆಗೆ ತಕ್ಕ ವಸ್ತುವ
ನೋಳವಿಸಿಕೊಂಡಾ ದ್ಯುಮತ್ಸೇನಾಶ್ರಮಕೆ ತನ್ನ |
ಬಾಲೆಯನು ಕರೆಕೊಂಡು ಜೋಯಿಸ
ಪೇಳಿದ ಮುಹೂರ್ತದೊಳು ಪರಿಜನ
ಜಾಲ ಸಂಗಡ ಬರಲು ಸತಿಯೊಡಗೂಡಿ ಹೊರವಂಟ || ೧

ಬರುತಿರಲು ಮುಂಗಡೆಯೊಳೊಪ್ಪುವ
ಸರಳ ಶಾಖಾ ಲಗ್ನ ವಲ್ಲರಿ
ಭರದಿ ಬಾಗಿದ ತರುಗಳಿಂ ಕೃತ ಹೋಮ ಧೂಮಗಳಿಂ |
ತೊರೆದು ತಮತಮಗಿರುವ ವೈರವ
ಚರಿಪ ಮೃಗ ಸಂಕುಲದಿ ನೋಡಲ
ದುರಿತಹರವೆಂದೆನಿಸಿ ಮೇಧ್ಯಾರಣ್ಯ ವೊಪ್ಪಿದುದು || ೨

ಆ ವನದೊಳಾಶ್ರಮದಿ ನಲವಿಂ
ಪಾವನ ಕುಶಾಸನದಿ ಕುಳಿತಿಹ
ಭೂಮಿಸುತನಾದಾ ದ್ಯುಮತ್ಸೇನಾಖ್ಯನನು ಕಂಡು ।
ದೇವ ಕೇಳಶ್ವಪತಿಯೆಂಬಾ
ಭೂವರನು ನಾಂ ನಿಮ್ಮ ಪದ ರಾ
ಜೀವಗಳಿಗಭಿವಂದಿಸುವೆನೆಂದೆರಗಿದನು ಪದಕೆ ॥ ೩

ಎನಲೊಡನೆ ವಿಧಿಪೂರ್ವವಾಗಿಯೆ
ಜನಪತಿಗೆ ಮಧುಪರ್ಕವನು ಕೊ
ಟ್ಟನುನಯಂ ಮಿಗೆ ಸತ್ಕರಿಸಿ ಬಳಿಕಾ ದ್ಯುಮತ್ಸೇನ ।
ಜನಪ ಕುಶಲನೆ ನಿನಗೆ ನಿನ್ನಯ
ಜನಪದವು ನಿಷ್ಕಂಟಕವೆ ಪಾ
ವನ ಚರಿತ ನೀಂ ಬಂದ ಕಾರಣವೇನು ಪೇಳೆಂದ ॥ ೪

ಆಲಿಸೈ ರಾಜರ್ಷಿ ಎನ್ನಯ
ಬಾಲೆಯೀ ಸಾವಿತ್ರಿಯೆಂಬಳ ಸು
ಶೀಲನೆನಿಸಿದ ನಿಮ್ಮ ಪುತ್ರಗೆ ಮದುವೆಯನು ಮಾಡಿ ।
ತಾಳಿ ಹರ್ಷವ ಬಂದೆನ್ನೈ ನೃಪ
ಮೌಳಿಮಣಿ ಕಲ್ಪೋಕ್ತನಾಗೀ
ಬಾಲೆಗಂ ತವ ಬಾಲಕಂಗಂ ಮದುವೆ ಮಾಡೆಂದ ॥ ೫

ಜನಪ ನಿನ್ನಭಿಮತವ ನೋಡಿದೊ
ಡೆನಗೆ ಪರಮಾಶ್ಚರ್ಯವಾದುದು
ಕನಕಗಿರಿಗಾ ಕಾಡುಮೆಟ್ಟೆಕದಾವ ಸಂಬಂಧ ।
ಅನುಪಮಿತ ಸಾಮ್ರಾಜ್ಯಶಾಲಿಗ
ಳೆನಿಸಿರುವ ನೀವೆಲ್ಲಿ ಘನ ಕಾ
ನನ ತಪಃಕ್ಲೇಶಾನ್ವಿತರು ನಾವೆಲ್ಲಿ ಹೇಳೆಂದ ॥ ೬

ಈಗನದಿಂದೇನು ಸುಮುಖಾ
ಭಾಗ ಕೇಳ್ಳೈ ಶತ್ರು ಜನರಿಂ
ಪ್ರೋಗಬಾಧಿಸಿಕೊಂಡು ರಾಜ್ಯವನೀ ಮಹಾ ವನಕೆ |
ಸಾಗಿ ಬಂದತಿಘೋರ ಕಷ್ಟವ
ನೀಗ ವನದೊಳಗನುಭವಿಸುತ್ತಿರ್
ಯೋಗಿ ಧರ್ಮದಿ ತಪವನಾಚರಿಸುತ್ತಲಿಹನೆಂದ ॥ ೭

ಇಂತು ತಪಿಸುವ ನೃಪ್ರ ಸೇರ್ದವ
ಳಂತು ಸಹಿಪಳು ಕಷ್ಟಗಳ ಭೂ
ಕಾಂತ ನಿನ್ನಯ ಪುತ್ರಿ ಕೋಮಲಗಾತ್ರಿ ಸಾವಿತ್ರಿ |
ಸಂತಸದಿ ನಾಂ ಪ್ರಾರ್ಥಿಸಲ್ಕಿನ
ನಂತರಾಯವ ಕೇಳ್ದು ನಿನ್ನತ
ನೀಂ ತಿಳಿಯಬೇಡೆಂದು ಪೇಳಿದನಾ ದ್ಯುಮತ್ಸೇನ ॥ ೮

ಜನಪತಿರ್ಗೆ ನೀನಿಂತು ನುಡಿದಿರೆ
ಹಾನಿವೃದ್ಧಿಗಳೆಂಬುದಿವು ತಾ
ನೇನು ಶಾಶ್ವತಗಳೆ ವಿಚಾರಿಸಿ ನೋಡೆ ನಿಲಿಯುಲ್ಲ |
ದೀನನಾಗುವನೊರ್ವ ರಾಜ್ಯ
ಶ್ರೀನಿಲಯನಾದವನು ದೀನನು
ಹಿಸಾ ನಿಲಕೆ ಸವಸ್ರಾಜನೆನಿಸುವನೊರ್ವ ಕೇಳೆಂದ ॥ ೯

ಎಲೆಲೆ ಗುಣಸಂಪದಗಳೊಳು ತಾಂ
ಗುಣವೆ ಹಿರಿದೈ ಸಂಪದಂಗಳ
ಗಣಿಸುವರು ಮೂಢರು ಮಹಾಶಾಪಾಶ ನಿಯಮಿತರು |
ಗುಣಗಳುಳ್ಳ ಮನುಷ್ಯನೇ ಧಾ
ರಿಣಿಯೊಳಧಿಕ ಜನೈಕ ಮಾನ್ಯನು
ಗುಣರಹಿತಗೇನಿರ್ದೊಡೇಂ ತೃಣ ಸದೃಶನವನೆಂದ ॥ ೧೦

ಕುಲ ವಯೋ ರೂಪಗಳ ನೋಡದೆ
ಕಲೆಯ ನೋಡದೆ ಗುಣವ ನೋಡದೆ
ನೆಲದೊಳಗೆ ಶಿವಭಕ್ತನೇ ಬಹುಯೋಗ್ಯ ವರನೆಂದು |
ಒಲಿದು ಗುಣವತಿ ಸುತೆಯನಿತ್ತಾ
ಬಳಿಕಳಲುವಾ ಸುತೆಯ ಶಾಪಂ
ನಗೆಗೆ ಗುರಿಯಾಗುವ ಕುಪಾತ್ರರ ಮಾತದೇಕೆಂದ || ೧೧

ಜ್ಞಾನನಿಧಿಯುದರಿಂದ ಸುಗುಣ ನಿ
ಧಾನನೆನಿಸಿರುತಿರ್ಪ ನಿಮ್ಮಯ
ಸೂನುವಿಗೆ ಗುಣವತಿಯೆನಿಪ್ಪೀ ಸುತೆಯನೊಲಿದಿತ್ತು |
ನಾನು ಸಂತಸಪಡುವೆನೆಂಬ ಮ
ನೋನುರಾಗವ ಸಲಿಸಬೇಕೆಂ
ದಾ ನರೇಂದ್ರನು ನುಡಿಯೆ ಪೇಳಿದನಾ ನೃಪುತ್ರನ || ೧೨

ಎಲೆ ನೃಪೋತ್ತಮ ನಿನ್ನೊಡನೆ ನಾ
ಕೆಳೆಯಕೊಡೆಗಳನು ಮಾಡಬೇಕೆಂ
ದೆಳಸಿರುವೆನಾದರಿಯು ಮಾಡುವುದೇನು ರಾಜ್ಯವನು |
ಕಳೆದುಕೊಂಡ ನಿಮಿತ್ತದಿಂ ನಿ
ನ್ನೊಳಗೆಮಗೆ ಸಂಬಂಧ ತಾನೆಂ
ತಳವಡುವುದೆಂದುಸಿರ್ದೆನಲ್ಲದೆ ಬೇರೆಯಿಲ್ಲೆಂದ || ೧೩

ಅರಸ ಕೇಳ್ಕೆ ನಿನ್ನ ಬಂಧುತೆ
ದೊರೆತುದೆನ್ನಯ ಪುಣ್ಯವೇ ಸರಿ
ಪರಿಣಯವ ಬೆಳಸೀಗ ನೀನೆಂದೆನಲು ಸಂತಸದಿ |
ಹರುಷದಿಂ ಬಳಿಕಶ್ವಪತಿ ತಾಂ
ಕರಸಿದನು ಮುನಿವರರ ಕೂಡಲೆ
ವಿರಚಿಸಿದರಾ ಮುನಿಗಳೊಲವಿಂ ಸ್ವಸ್ತಿವಾಚನೆಯಾ || ೧೪

ಶುಭ ಮುಹೂರ್ತದೊಳಶ್ವಪತಿ ಮುದಿ
ಸಭೆಯು ಜಯವೆನೆ ಸತ್ಯವಂತಂ
ಗಭಿನವಾಲಂಕಾರ ಭೂಷಿತೆಯಾದ ನಿಜಸುತೆಯ ।
ವಿಭವದಿಂದಲಿ ಧಾರೆಯೆರೆದನು
ನಭವ ಘುಮ್ಮಿಡಿಸಿದುದು ಜಯದುಂ
ದುಭಿ ನಿನದವೇನೆಂಬೆನಾ ಪರಿಣಯ ಮಹೋತ್ಸವವ ॥ ೧೫

ಅಳಿಯನನು ಮಗಳನು ನಿರೀಕ್ಷಿಸಿ
ನಲವಿನಿಂದೀಗೆನ್ನ ಪುಣ್ಯವು
ಫಲಿಸಿತೆಂದಾನಂದ ಸಾಗರದಲ್ಲಿ ಮುಳುಗುತ್ತ ।
ಬಳಿಕ ರತ್ನವನಿತ್ತು ಮಗಳಿಗೆ
ಬಳುವಳಿಯ ಕೊಟ್ಟಖಿಳ ಭೂಸುರ
ಕುಲಕೆ ಕರೆದನು ಕನಕ ವರ್ಷವನಧಿಕ ಹರ್ಷದೊಳು ॥ ೧೬

ಒರೆವೆನೇನಾನಶ್ವಪತಿ ನೃಪ
ವರನ ಹರ್ಷವ ಧರ್ಮಜನೆ ಕೇಳ್
ಧರೆಯೊಳುತ್ತಮ ಪುರುಷಗಣಾಗ್ರಜನಿಸಿತ್ತ ಸಂತಸಕೆ ।
ಸರಿಯದಾವುದು ಪೇಳು ಬಳಿಕಾ
ಧರಣಿಪತಿ ನಿಜಪುರಕೆ ಗಮಿಸುವ
ಭರದೊಳಣುಗಿಯ ಮುಡಿದಡವುತಿಂತೆಂದನೊಲವಿನಲಿ ॥ ೧೭

ಅತ್ತೆಮಾವರ ಸೇವೆಗೆಯ್ ಪತಿ
ಯುತ್ತರಕೆ ತಲೆವಾಗಿ ನಡೆ ಮುದ
ವೆತ್ತು ಪತಿಶುಶ್ರೂಷೆಗೈ ನೀನಲಸದಾಚರಿಸು ।
ಮತ್ತಕಾಶಿನಿಯರಿಗೆ ಪತಿಯೇ
ಉತ್ತಮೋತ್ತಮ ದೈವವಲ್ಲದೆ
ಮತ್ತೆ ಬೇರಿಲ್ಲಣುಗಿ ಪತಿಹಿತೆಯಾಗಿ ಬಾಳೆಂದ ॥ ೧೮

ಕ್ಷಿತಿಯೊಳಗೆ ನೀನಿಂತು ಸುಚರಿತ
ಯುತೆಯೆನಿಸಿ ಮದ್ವಂಶವನು ತವ
ಪತಿಯ ವಂಶವನುದ್ಧರಿಸಿ ಬಾಳಣುಗ ಸುಖಿನಾಗಿ ।
ಮತಿಯುತರು ಪೇಳುವರು ಪುತ್ರಾ
ಚ್ಛತಗುಣಾ ಪುತ್ರೀ ಎನುತ್ತಲಿ
ಸ್ಮೃತಿಯೊಳಿದು ನಾನುಸಿರ್ದುದಿಲ್ಲವೆನುತ ನುಡಿದನು ॥ ೧೯

ಲಲನೆಯೊಡಗೂಡಿಂತುಸಿರ್ದು ಮಂ
ಗಳತರದ ಸದ್ಬುದ್ಧಿ ವಾದಂ
ಗಳನು ಬಳಿಕಾ ದ್ಯುಮತ್ಸೇನನ ಕರಗಳಂ ಪಿಡಿದು ।
ಸಲಹುವುದು ನಿಮ್ಮಣುಗಿಯೆಂದೀ
ಲಲಿತಮತಿ ಸಾವಿತ್ರಿಯನು ನಾಂ
ತಳ್ವೆನೆಂದುಸಿರ್ದಶ್ವಪತಿ ನಿಜಪುರಕೆ ಗಮಿಸಿದನು ॥ ೨೦

ಕ್ಷಿತಿಪ ಕೇಳ್ಳೈ ಸಕಲ ಸುಗುಣಾ
ನ್ವಿತೆಯು ಪತಿಯನು ಪಡೆದೆ ನಾನೆ
ನ್ನುತ ನಲಿವನಾ ಸತ್ಯವಂತನು ಮುದದಿ ವರಿಸಿರ್ದ ।
ಪತಿಯು ಸೇರಿದೆನೆಂದು ನಲಿವಳು
ಮತಿಯೊಳಾ ಸಾವಿತ್ರಿಯಾ ದಂ
ಪತಿಗಳಾನಂದವನು ವರ್ಣಿಸಲರಿಯೆ ನಾನೆಂದ ॥ ೨೧

ಅರಸ ಕೇಳ್ ನಿಜ ಪಿತನು ನಗರಿಗೆ
ತೆರಳಲಾ ಸಾವಿತ್ರಿ ಪತಿ ಪಿಡಿ
ದಿರುವ ಮುನಿ ವರ್ತನವ ಪಿಡಿದಳದೆನಿತು ಹೃಷ್ಟಮತಿಯೊಳ್ ।
ತೊರೆದು ಪಿತನಿತ್ತುಡಿಗೆ ತೊಡಿಗೆಯ
ಧರಿಸಿ ನಲವಿಂ ನಾರ ಸೀರೆಯ
ನುರುತರದ ಭಕ್ತಿಯೊಳುಪಚರಿಸಿದಳು ನಿಜಪತಿಯ ॥ ೨೨

ತ್ರೌರುಷಮನೆಯ್ದೆ ಸಿರಿಗಳಿಗೆ ಮಿತಿ
ಮೀರಿ ಬಿಕ್ರನೆ ಜೀಗಿ ಮರಹಂ
ಕಾರದಲಿ ಶಿಕ್ಷಿಸದೆ ಬಡತನವುಳ್ಳ ನಿಜಪತಿಯ |
ದೂರಿ ರೌರವಕಿಳಿಯುತಿಹ ದು
ರ್ನಾರಿಯರ ಮಾತೇಕೆ ಪತಿಗನು
ಸಾರವಾಗಿಯೆ ನಡೆದ ಸುಚರಿತೆಯಿರವ ಕೇಳೆಂದ || ೨೩

ಪಿತನಧಿಕ ಸಾಮ್ರಾಜ್ಯಪದ ಸಂ
ಯುತನೆನಿಸಿ ಬಾಳುತ್ತಲಿರ್ದನು
ಪತಿಯು ವನದಿ ತಪಸ್ವಿವೃತ್ತಿಯೊಳಿರ್ದರೆಯು ತನ್ನ |
ಪಿತನ ಸಿರಿಯನು ಮನದಿ ನೆನೆಯದೆ
ಪತಿಪದವೆ ಸಂಪದವೆನುತ ಸು
ವ್ರತೆ ಪತಿಯನನುಸರಿಸಿದಳು ಸಾವಿತ್ರಿ ನಲಿವಿನಲಿ || ೨೪

ನೆನೆವಳೇ ಚಿತ್ತದಲಿ ತನ್ನಯ
ಜನಕಗೃಹದಾವಾಸ ಸೌಖ್ಯವ
ಮನದೊಳೆಳ್ಳನಿತಾದರುಂ ವನವಾಸಕಲುಕಿದಳೆ |
ಇನಿಯನಿರುವೆಲೆವನೆಯೆ ತನಗರ
ಮನೆಯೆನುತ ಪತಿಪಾದಸೇವಾ
ಘನ ಸುಖವನನುಭವಿಸುತಿರ್ದಳು ಜನಪ ಕೇಳೆಂದ ೨೫

ಸ್ನೇಹದಿಂ ವಿಶ್ವಾಸದಿಂ ಸ
ದ್ಭಾವದಿಂ ನಮೊದಮೊಗಳಿಂದವು
ತೀವ ಭಕ್ತಿಯೊಳತ್ತೆ ಮಾವಂದಿರನು ಪತಿಯನ್ನು |
ಆ ವಧೂಮಣಿ ಭಕ್ತಿಮಿಗೆ ಸಂ
ಭಾವಿಸುತ ಸಂತೋಷಪಡಿಸಿದ
ಳೀ ವಿಧದ ಪತಿವ್ರತೆಯರೇ ಸಂಸಾರ ಸುಖವೆಂದ || ೨೬

ಚರಣಗಳನೊತ್ತುವುದು ಮೊದಲಾ
ಗಿರುವ ಶುಶ್ರೂಷೆಯೊಳಗತ್ತೆಯ
ಹರುಷವಡಿಸುತ ನಿತ್ಯ ದೇವಾರ್ಚನೆಯ ಮಾಡಿಸುತ ।
ಪರಿಚರಿಯದೊಳು ಹಿತ ವಚನದೊಳು
ಕುರುಡನಾಗಿಹ ಮಾವನನು ಸ
ತ್ಕರಿಸಿ ಸಂತೋಷಿಸಿದಳಾ ಮೃದುಗಾತ್ರಿ ಸಾವಿತ್ರಿ ॥ ೧೭

ಹಿತ ವಚನದಿಂ ಶಾಂತಿ ಗುಣದಿಂ
ಚತುರತೆಯೊಳಾಚರಿಪ ಸೇವೆಯಿ
ನತಿಶಯಿತ ಸ್ತ್ರೈತ್ರ್ಯೋಪಚಾರಗಳಿಂದಮುಂ ತನ್ನ ।
ಪತಿಯ ಮನವನು ತೃಪ್ತಿಪಡಿಸುತ
ಸತಿ ಮನೋವಾಕ್ಕಾಯದೊಳಗಂ
ಪತಿಯೆ ಗತಿಯೆಂದೆಣಿಸಿ ನಡೆದಳು ಜನಪ ಕೇಳೆಂದ ॥ ೧೮

ದೀಪಿಸುವಪ್ರೋಲ್ ಬೆಳಗುತಲಿ ಪಾ
ಕೋಪಕರಣವನಡಿಗೆಗಳನವ್ಯ
ತೋಪಮಾನವೆನಲ್ಕೆ ಮಾಡುತಲತ್ತೆಮಾವರಿಗಂ ।
ಓಪಗಂ ಬಡಿಸುವಳು ಧಾನ್ಯವ
ಗೋಪನವ ಮಾಡಿಡುವಳೊಲವಿಂ
ದಾ ಪತಿವ್ರತೆ ಗೃಹವ ಸಿಂಗರಮಾಡಿಕೊಂಡಿಹಳು ॥ ೧೯

ಕೊಳ್ಳಳಾಹಾರವನು ಪತಿಯುಂ
ಡಲ್ಲದಾತನ ಭುಕ್ತ ಶೇಷವ
ಸಲ್ಲಲಿತ ಮತಿಯಿಂದ ಭೋಜಿಸುತಿಹಳು ನಿಜಪತಿಯು ।
ಎಲ್ಲಿಗಾದರು ಪೋಗಿಬರಲಿದಿ
ರಲ್ಲಿ ಕಂಡೊಡನೆದ್ದು ತತ್ಪದ
ಪಲ್ಲವಕ ತೊಳೆದಿತ್ತು ಪೀಠವನುಪಚರಿಸುತಿಹಳು ॥ ೨೦

ಪತಿಗೆ ಬೇಡದ ವಸ್ತುಗಳನಖಿ
ಳತಿಸದಿರ್ಪಳು ಪತಿಯು ಕೊಟ್ಟಾ
ಣತಿಯ ಮೀರದೆ ನಡೆಯುವಳು ಪತಿಹಿತವ ಬಯಸುವಳು |
ಪತಿಮತವನನುವರ್ತಿಸಿರುವಳು
ಪತಿಯನೇ ಪರದೈವವೆನ್ನುತ
ಮತಿಯೊಳೆಣಿಸುತ ನಡೆವಳಾ ಸುಚರಿತ್ರೆ ಸಾವಿತ್ರಿ || ೩೧

ಕೇಳು ನೃಪ ಸಾವಿತ್ರಿಯಿಂತು ಸು
ಶೀಲದಿಂ ಶುಶ್ರೂಷೆಯಿಂದನು
ಕೂಲತೆಯಿನನುದಿನದಿ ಪತಿಯನು ತೃಪ್ತಿಪಡಿಸುತಿರೆ |
ತಾಳಿದಾನಂದದೊಳು ಸತ್ಯಸು
ಶೀಲರಾಪವರೆಲ್ಲರೊಲವಿಂ
ಕಾಲಗಳ ಕಳೆದರು ತಪೋವರ್ತನದಿ ವನದೊಳಗೆ || ೩೨

೪ನೆಯ ಆಶ್ವಾಸ

ಸೂಚನೆ || ಪ್ರಾಣ ನಾಥನನಗಲಲಾರದೆ
ಯೇಣ ಲೋಚನೆಯತ್ತೆ ಮಾವದಿ
ರಾಣತಿಯ ಪಡೆದಿನನೊಡನೆ ತಾಂ ಗಮಿಸಿದಳು ವನಕೆ ||

ಎಲೆ ಸುಧಾಕರಕುಲಜ ಕೇಳ್ಳೈ
ಬಳಿಕಲಾ ಸಾವಿತ್ರಿ ಮುನಿಕುಲ
ತಿಲಕ ಪೇಳ್ದವಧಿಗುಳಿಯಲು ನಾಲ್ಕು ದಿವಸಗಳು |
ಕಳವಳಿಸಿ ಮನದೊಳಗೆ ನಿಜಪತಿ
ಯಳಿವ ನೆನೆನೆನೆದಳಲಿ ಕೂಡಲೆ
ತಳೆದಳ್ಳೈ ತ್ರಿದಿನೋಪವಾಸವ್ರತವ ನಿಯಮದಲಿ || ೧

ಸತಿಯು ಹಗಲಿರುಳೆಲ್ಲಿಯುಂ ನಿಂ
ದತಿಕಠೋರವ್ರತವನಾಚರಿ
ಸುತಲಿರಲ್ಕಂಡಾ ದ್ಯುಮತ್ಸೇನಾವನೀಪತಿಯು ।
ಮತಿಯೊಳನುತಾಪವನು ತಾಳ್ದೀ
ಕ್ಷಿತಿಪಸುತೆ ಕಷ್ಟೋಪವಾಸ
ವ್ರತವನೆಸಗಲ್ಕಾರಣವದೇನೆಂದು ಚಿಂತಿಸಿದ ॥ ೧

ವಸುಧೆಯೊಳು ಮುನಿ ಜನಗಳುಂ ತಾ
ವೆಸಗಲಸದಳವೆನಿಪ ನಿಯಮವ
ನೆಸಗಲಾರ್ಗೆಯು ಕುಸುಮಕೋಮಲ ಗಾತ್ರಿಯಳೆ ನೀನು ।
ಅಸಮವಾದೀ ವ್ರತವ ಬೇಡೆಂ
ದುಸಿರ್ವುದೆಮಗನುಚಿತವು ನೆರವೇ
ರಿಸುವುದೆಂಬುದೆ ಸನ್ಮತ ಧರ್ಮವಿದಲ್ತೆ ಲೋಕದಲಿ ॥ ೨

ಅರಸ ಕೇಳಾ ರಾಜ ಋಷಿಯಿಾ
ಪರಿ ನುಡಿದು ಪೋಗಲ್ಕೆ ಬಳಿಕಾ
ತರುಣಿ ತಾಂ ನಿಂತಂತೆ ನಿಂತಿರುತಿರೆ ಮಹಾತಪದಿ ।
ಬಿರುವಿಸಿಲ ಬಲುಬೇಗೆಯು ಪಟಳ
ಕಿರದೊಣಗಿ ನಿಂದಿರ್ಪ ಬಳ್ಳಿಯ
ತೆರದೊಳಿರ್ದಳು ನಿರಶನವ್ರತದಿಂದ ಕೃಶಳಾಗಿ ॥ ೪

ಕಳೆದುವೀ ಪರಿ ಮೂರು ದಿನಗಳು
ಬಳಿಕಲೀ ದಿನದೊಳಗಲೇ ಪತಿ
ಗಳಿವೆನುತ ಮನದೊಳಗೆ ಹೆಚ್ಚಿದ ದುಃಖವನು ಸಹಿಸಿ ।
ನಳಿನ ಬಾಂಧವನುದಯದೊಳಗಾ
ಲಲನೆ ಯಜ್ಞೇಶ್ವರನ ಪೂಜಿಸಿ
ನಲವಿನಿಂ ಮುನಿಕುಲಕೆ ಭಕ್ತಿಯೊಳೆರಗಿ ನಿಂದಿರಲು ॥ ೫

ಎಲೆ ಮಗಳೆ ಸಾವಿತ್ರಿ ನೀನೀ
ನೆಲದಿ ದೀರ್ಘಸುಮಂಗಲೀತ್ವವ
ತಳೆದು ಬಾಳೆಂದೆನುತ ಹರಸಿದರಖಿಲ ಮುನಿವರರು ।
ನಲವಿನಿಂದಂತಾಗಲೆನ್ನುತ
ಲಲನೆ ನಿರುಪಮ ಭಕ್ತಿಭಾವದಿ
ತಳೆದಳೈ ಶಿರದೊಳಗೆ ಮುನಿವರರುಸಿರ್ದ ಹರಕೆಗಳ ॥ ೬

ಕೇಳು ನೃಪ ನಾರದರು ಹೇಳಿದ
ಕಾಲವನು ನೆನೆನೆನೆದು ಮನದೊಳು
ತಾಳಿ ದುಗುಡುವ ಪಾರಣೆಯ ತಾಂ ಮಾಡದಿರೆ ಕಂಡು ।
ಹೇಳಲೇನವಳತ್ತೆಮಾವರು
ತಾಳುತತಿದುಃಖವನು ಬಂದಾ
ಬಾಲೆಯನು ಮುಡಿದಪಿ ನುಡಿದರು ಮಧುರ ವಚನದಲಿ ॥ ೭

ಎಲೆ ಮಗಳೆ ನೀಂ ಪಿಡಿದ ಸುವ್ರತ
ಬೆಳೆದ ಬಳಿಕಲು ಭೋಜನವ ನೀ
ನುಳಿದ ಕಾರಣವೇನು ಸಾವಿದನೀಗ ನೋಡುತಲಿ ।
ಅಳಲ ಸೈರಿಪೆವೆಂತು ನಿನಗೀ
ಛಲವದೇತಕೆಯೆನುತ ಮನದೊಳು
ಬಲುಮರುಗಿ ಬೆಸಗೊಂಡರಾ ದಂಪತಿಗಳಾ ಸತಿಯ ॥ ೮

ಜಲಜಬಾಂಧವನಪರ ಜಲನಿಧಿ
ಗಿಳಿದ ಬಳಿಕಾಹಾರವನು ನಾಂ
ಕೊಳುವೆನೆಂದವರಡಿಗೆ ನಮಿಸಲು ಸತಿಯು ವಿನಯದಲಿ ।
ಬಳಿಕ ಗುಣನಿಧಿ ಸತ್ಯವಂತನು
ಫಲವ ಲಲನೆಗೆ ತರಲು ಪರಶುವ
ತಳೆದು ಕರದಲಿ ಕಾನನಕೆ ಮಹಿಲವಲಿ ಪೊರಮಡಲು ॥ ೯

ಕಾಣುತವ ಕಾನನಕದೊರ್ವನೆ
ಪ್ರಾಣನಾಥನೆ ಪೋಗಬೇಡೆ
ಪ್ರಾಣೆ ನಿನ್ನೊಡಗೂಡಿ ಬರುವೆನು ನಿನ್ನ ಬಿಟ್ಟಿರೆನು ।
ಮಾಣದೆನ್ನನು ಸಂಗಡಲಿ ಸ
ತ್ರಾಣ ಕರಕೊಂಡ್ಯೈದೆನುತ ನಿ
ತ್ರಾಣೆಯಾಗಿಯು ಬೇಡಿಕೊಂಡಳು ಪತಿಯ ಸಾವಿತ್ರಿ ॥ ೧೦

ಬಹಳ ಕಂಟಕ ಕೀರ್ಣವಾಗಿಹ
ಗಹನ ಮಾರ್ಗವದೆಲ್ಲಿ ಸರಸೀ
ರುಹದವೋಲ್ ಮೃದುವಾದ ತನ್ವಿಯ ಚರಣ ತಳವೆಲ್ಲಿ ।
ಸಹಿಸಬಲ್ಲಳೆ ಕೋಮಲಾಂಗಿಯು
ಮಿಹಿರ ಕಿರಣದ ತಾಪವನು ತಾ
ನಹಹ ನಾನಿದಕೇನ ಮಾಡುವೆನೆಂದು ಚಿಂತಿಸಿದ ॥ ೧೧

ಅರಸಿ ನೀನಾವಾಗಲುಂ ಕಂ
ಡರಿಯೆ ದುರ್ಗಮ ವಿಪಿನ ಮಾರ್ಗವ
ಚರಿಸುವುದು ಬಲುಕಷ್ಟವಪ್ಪುದು ಕೇಳಲರಿಪದನು ।
ನಿರಶನವ್ರತದಾಚರಣೆಯಿಂ
ಹಿರಿದು ಕೃಶಳಾಗಿರುವೆ ನಿನ್ನೀ
ಚರಣದಿಂದಲಿದೆಂತು ನಡೆಯುವೆ ಕಾಂತೆ ಹೇಳೆಂದ ॥ ೧೨

ಓಸರಿಸಬೇಡೆನ್ನನೀಯುಪ
ವಾಸದಿಂದೆಳ್ಳನಿತು ನನಗಾ
ಯಾಸವಿಲ್ಲವು ನಿನ್ನ ಸಂಗಡ ವನಕೆ ಬಹೆನೆನ್ನ ।
ಆಸೆಯನು ಕಡೆಗಣಿಸಬೇಡ ಮ
ಹೀಶ ನೀನೆಂದೆನುತ ಬೇಡಿದೊ
ಡಾ ಸತೀಮಣಿ ಸತ್ಯವಂತನು ನುಡಿದನೊಲವಿನಲಿ ॥ ೧೩

ಅರಸಿ ನೀ ನುಡಿದಂತೆಯಾಗಲಿ
ಹಿರಿಯರಾಣತಿಯಿಲ್ಲದೊಂದನು
ವಿರಚಿಸುವುದನುಚಿತವು ಕೇಳಿದರಿಂದ ನೀಂ ಪೋಗಿ ।
ಒರೆಯುವುದು ನಿನ್ನತ್ತೆಮಾವರಿ
ಗೆರಗುತವರಾಣತಿಯನಿತ್ತೊಡೆ
ಕರೆದುಕೊಂಡೈದುವೆನೆನುತ್ತಲಿ ಕಳುಹಿದನು ಸತಿಯ ॥ ೧೪

ತೆರಳಿ ಹರುಷದೊಳತ್ತೆ ಮಾವರಿ
ಗೆರಗಿ ಮತ್ಪತಿಯಗ್ನಿಹೋತ್ರದ
ಪರಮ ಕಾರ್ಯಕೆ ತರೆ ಸಮಿತ್ಫಲಗಳನು ವಿಪಿನಕ್ಕೆ ।
ಹೊರಟಿರುವನಾತನ ನಿರೋಧಿಪು
ದರಿದೆನಗೆ ಮೋಕ್ಷಾಶ್ರಮವ ನಾಂ
ತೊರೆದು ಪೋದವಳಲ್ಲವೆಲ್ಲಿಗಮಿಂದುವರಿಯಂತ ॥ ೧೫

ಒರೆಯಲಳುಕುವೆ ನಿಮಗೆ ಸುಮನೋ
ಹರ ವನವ ನವಲೋಕಿಸಲು ನನ
ಗಿರುವುದಾಸೆಯು ತಾನದಲ್ಲದೆಯೆನ್ನ ವಲ್ಲಭನ ।
ವಿರಹವನು ಸೈರಿಸಲರಿಯೆನೆ
ನ್ನರಸನೊಡನಾಂ ಪೋಗಲಾಜ್ಞೆಯ
ಕರುಣಿಸಲು ಬೇಕೆಂದು ಬಿನ್ನವಿಸಿದಳು ಸಾವಿತ್ರಿ ॥ ೧೬

ಎಂದಿವಳ ಪಿತನೀಕೆ ನಿಮ್ಮಯ
ನಂದನೆಯೆನುತ್ತೆಮ್ಮ ಹಸ್ತಕೆ
ತಂದುಕೊಟ್ಟನೊ ನಲವಿನಿಂದಿವಳಂದು ಮೊದಲಾಗಿ ।
ಒಂದನಾದರು ನಮ್ಮ ಬೇಡಿದ
ಳೆಂದೆನುವ ಮಾತಿಲ್ಲವದರಿಂ
ದೊಂದಲೀ ಕೋರಿಕೆಯನೆನ್ನುತ್ತವಳ ಮುಡಿದಡವಿ ॥ ೧೭

ತನುಜೆ ಲಾಲಿಪುದೆಚ್ಚರದಿ ನಿ
ನ್ನಿನನೊಡನೆ ನೀಂ ಪೋಗಿ ಬಾರೆಂ
ದೆನುತಲವರಾಣತಿಯನೀಯಲು ಮನದಿ ಮುದವಾಂತು ।
ತನಗಿರುವ ಪರಿತಾಪವನು ಪತಿ
ಗಿನಿತು ತೋರಿಸದಂತೆ ನಗುತಿಹ
ಳೆನೆ ನಿಜೇಶನ ಕೂಡೆ ನಡೆದಳು ವಿಪಿನಕಂ ಸುಮತಿ ॥ ೧೮

ಕುಣಿವ ನವಿಲುಗಳಿಂದ ವೀಣಾ
ಕ್ವಣಿತವೆನೆ ದನಿಗೆಯ್ವ ಕೋಕಿಲ
ಗಣದಿ ಕುಸುಮೋತ್ಕರದಿ ಝೇಂಕರಿಸುವ ಮದಾಳಿಗಳಿಂ ।
ಅಣಿಯರದಿ ಚರಿಪಂಚೆಗಳ ತಿಂ
ತಿಣಿಗಳಿಂ ರಂಜಿಸುವ ವಿಪಿನಾಂ
ಗಣವನಿದಿರೊಳು ಕಂಡಳಾಯತ ನೇತ್ರೆ ಸಾವಿತ್ರಿ ॥ ೧೯

ನಳನಳಿಪ ಕುಸುಮಿತ ಲತಾ ಸಂ
ಕುಲದಿ ಫಲಿತ ರಸಾಲ ಪನಸಾ
ಮಳಕ ಮುಖ ತರು ನಿಕರದಿಂ ಪ್ರವಹಿಪ ನದೀನದದಿಂ ।
ಲಲಿತ ಕಮಲಾಕರಗಳಿಂ ಮಿಗೆ
ಸುಳಿವ ಸುರಭಿಯ ಪವನನಿಂ ಬಗೆ
ಗೊಳಿಪ ವಿಪಿನವನೀಕ್ಷಿಸುತ ನಲವಾಂತಳಾ ಕಾಂತೆ ॥ ೨೦

ಜಲರುಹಾಕ್ಷಿಯೆ ನೋಡು ತಮ್ಮೊಳು
ಮುಳುಗಿದರ ಪಾಪಂಗಳೆಲ್ಲವ
ಕಳೆವ ಪುಣ್ಯ ನದೀನದಂಗಳನಿತ್ತಲಿದೊ ನೋಡು ।
ಫಲಿತ ಪುಣ್ಯದ್ರುಮಗಳನು ಕಂ
ಗೊಳಿಪ ಪುಣ್ಯಾದ್ರಿಗಳನೆನ್ನುತ
ಸುಲಲಿತಾಂಗಿಗೆ ಸತ್ಯವಂತನು ತೋರಿಸುತ ನಡೆದ ॥ ೨೧

ಪೊಡವಿಪತಿ ಕೇಳ್ ಸತಿಯು ರೀತಿಯ
ನಡಿಗಡಿಗೆ ನೋಡುತ್ತ ಮುನಿಪತಿ
ನುಡಿದ ನುಡಿಯನು ನೆನೆನೆನೆದು ಬಲುಮರುಗಿ ಮನದಲ್ಲಿ ।
ತಡೆದು ದುಃಖವ ನಿಜಪತಿಯು ಸಂ
ಗಡ ನಡೆಯುತಾ ಕಾಲವನು ತಾ
ಬಿಡದೆ ನಿರೀಕ್ಷಿಸುತಿರ್ದಳಾ ವನದೊಳಗೆ ಸಾವಿತ್ರಿ ೨೨

೫ನೆಯ ಆಶ್ವಾಸ

ಸೂಚನೆ ॥ ಯಮನೊಡನೆ ಧರ್ಮಪ್ರಸಂಗವ
ಸಮವ ಮಾಡುತ ತನ್ನರದಿ ನಿಜ
ರಮಣನಸುವನು ಪಡೆದಳಳಿದೊಡೆ ಮರಳಿ ಸಾವಿತ್ರಿ ॥

ಕೇಳು ಧರ್ಮಜ ಬಳಿಕಲಾ ಮುನಿ
ಶಾಲಿ ಬಲಿನಹ ಸತ್ಯವಂತನು
ಮೇಲೆನಿಪ ಫಲಗಳನು ಕೊಯ್ದಿರಿಸುತ್ತ ಪುಟಿಕೆಯೊಳು ।
ಜೋಲಿಯಿಂ ಕೊಡಲಿಯೊಳು ಕಾಷ್ಠವ
ಸೀಳುತಿರೆ ಬೆಮರ್ದಾಯಸದಿ ತಲೆ
ಸೂಲೆ ಜನಿಸಲು ತಡೆಯಲಾರದೆ ಕಾಂತೆಗಿಂತೆಂದ ॥ ೧

ಕೇಳು ಸತಿಯಾಯಾಸದಿಂ ತಲೆ
ಸೂಲೆ ಸಮನಿಸಿತಕ್ಕಟಾ ಕೈ
ಕಾಲು ನೋಯುವು ನಿಲ್ಲಲಾರೆನು ಹೃದಯದೊಳಗೆನಗೆ ।
ಶೂಲವಿರಿಯುದ ಘೋರ ಕಳವಳ
ಮೇಳವಿಸಿದುದು ಮಲಗಿಕೊಳುವೆನು
ತಾಳಲಾರೆನು ತಾಪವನು ತಾನೆಂದನಂಗನೆಗೆ ॥ ೨

ಹಿಡಿದು ಕರದಿಂ ಪತಿಯ ಶಿರವನು
ತೊಡೆಯಮೇಲಿಟ್ಟಕಟ ಮುನಿಪತಿ
ನುಡಿದ ದಿನ ನೇಮಾ ಮುಹೂರ್ತಕ್ಷಣವಿದೇ ಎನುತ ।
ಕಡುದುಗುಡವಾಂತಿರುವ ಸಮಯದೆ
ಮಡದಿಮಣಿ ತಾಂ ಕಂಡಳೈ ಸತಿ
ಯೆಡದಭಾಗದಿ ಬಂದು ನಿಂದ ಕರಾಳ ಕಾಲನನು ॥ ೩

ಧರಿಸಿ ಪಾಶಾಯುಧವ ಕರದೊಳ
ಗರುಣ ವಸ್ತ್ರವ ಹೊದೆದು ಮಣಿ ಭಾ
ಸುರಕಿರೀಟವ ತಳೆದು ಶಿರದೊಳು ಬೇಸಗೆಯೊಳುರಿವ ।
ತರಣಿಯಂದದಿ ಮೆರೆಯುತಲಿ ದೂರ
ದುರನೆ ನೋಡುತ ಸತ್ಯವಂತನ
ಶರೀರದೊಳಿರ್ದಾ ಕಾಲನನು ಕಡಂಜಿ ಮನದೊಳಗೆ ॥ ೪

ನಡುನಡುಗೆ ನಿಜಪತಿಯ ಶಿರವನು
ಮಡಗಿ ಪೊಡವಿಗೆ ಘಳಿಲನೆದ್ದವ
ನಡಿಗೆ ನಮಿಸುತಲೆಲೆ ಮಹಾತ್ಮನೆ ಪೇಳು ನೀನಾರು ।
ಒಡಲ ನೋಡಲು ದಿವ್ಯ ತೇಜವ
ಪಡೆದಿಹುದು ನೀನಾವ ದೇವತೆ
ಮಹಿಪ್ರದೇಶಕೆ ಬಂದೆಯೆಂದಳು ವಿನಯ ವಚನದಲಿ ॥ ೫

ಎಲೆ ಮಹಿತೆ ಸಾವಿತ್ರಿ ಸಾಧ್ವೀ
ಕುಲಮಣಿಯು ನೀನಾದ ಕಾರಣ
ನಿಲಿಪಿ ಕೇಳ್ ನಿನ್ನೊಡನೆ ಮಾತಾಡುವೆನು ಮಿಕ್ಕರಿಗೆ ।
ನೆಲೆಯ ತೋರುವನಲ್ಲ ದೇವತೆ
ಗಳೊಳು ಯಮನೆಂಬುವನು ನಾನೀ
ಇಳೆಗೆ ಬಂದಿಹ ತೆರನ ಪೇಳುವೆನಬಲೆ ಕೇಳೆಂದ ॥ ೬

ನಿನ್ನ ಪತಿಯಿಾ ಸತ್ಯವಂತನು
ಕನ್ನೆ ಕೇಳಲ್ಪಾಯುಪೀತನ
ನನ್ನ ಯಿಂ ಕೊಂಡೊಯ್ಯ ಬಂದೆನಿದೆನ್ನ ಕಾರ್ಯವೆನೆ ।
ಸನ್ನುತಾಂಗಿಯು ಕೇಳಿದೊಡನು
ತ್ಪನ್ನವಾದಳಲಿಂದ ಹೃದಯವು
ಛಿನ್ನವಾಗಲು ತಳೆದು ಮೂರ್ಛೆಯ ಬಿದ್ದಳವನಿಯಲಿ ॥ ೭

ಬಳಿಕ ತನ್ನಿಂ ತಾನೆ ಮೂರ್ಛೆಯ
ತಿಳಿದು ಬಲುಹಿಂ ಮನದಿ ಧೈರ್ಯವ
ತಳೆದು ತರಣಿಜನೊಡನೆ ನುಡಿದಳು ವಿನಯ ವಚನದಲಿ ।
ಎಲೆ ಮಹಾತ್ಮನೆ ನಿನ್ನ ದೂತರ
ಕಳಿಸದಿದು ನೀನೇತಕಾಗೀ
ಬಳಿಗೆ ಬಂದೆಯೆನಲ್ಕೆ ಕಾಲನು ಕಾಂತೆಗಿಂತೆಂದ ॥ ೮

ಬಾಲಿಕಾಮಣಿ ನಿನ್ನ ಪತಿ ಗುಣ
ಶಾಲಿ ಧರ್ಮಾತ್ಮನು ಸುರೂಪನು
ಶೀಲನದರಿಂದವನನೊಯ್ಯಲು ನಾನೆ ನಡೆತಂದೆ ।
ಕೇಳೆನುತಲಾ ಸತ್ಯವಂತನ
ಮೇಲೆ ಬೀಸುತ ಕರದ ಪಾಶವ
ಕಾಲನಾತನ ಜೀವಪುರುಷನ ಸೆಳೆದುಕೊಂಡೊಡನೆ ॥ ೯

ಚಳಕದಿಂದಲಿ ದಕ್ಷಿಣಕೆ ತಾಂ
ತೆರಳಲಾ ಸಾವಿತ್ರಿಯಾ ಕ್ಷಣ
ಪಳಿದ ಪತಿಯಂಗವನು ಮರಗುತವಿಂದೆಡೆಯೊಳಿರಿಸಿ ।
ಅಳುತಲಾ ಯಮನೊಡನೆ ಗಮಿಸಿದ
ಳಲಘು ನಿಯಮವ್ರತೆ ಪತಿವ್ರತೆ
ಬಳಿಕ ಬೆಂಬಳಿವಿಡಿದು ಬರಲ್ಕನು ಕಂಡನಾ ಕಾಲ ॥ ೧೦

ನಿಲ್ಲು ನೀಂ ಸಾವಿತ್ರಿ ಸಾಕಿ
ನ್ನಿಲ್ಲಿವರೆಗಂ ಬರುವೆ ನಿನ್ನಯ
ವಲ್ಲಭಗೆ ಪರಲೋಕ ಕರ್ಮವ ಮಾಡು ಪೋಗೆನಲು ।
ಎಲ್ಲಿಗೆನ್ನಯ ಪತಿಯನೊಯ್ವೆಯೊ
ಅಲ್ಲಿಗೈದುವೆ ನಾನು ಬೇರೆಂ
ಸೊಲ್ಲಿಸುವೆನಿದೆ ಧರ್ಮವೆನಗೆಂದಳು ಸರೋಜಮುಖಿ ॥ ೧೧

ಹಿರಿಯರನು ನಾಂ ಸೇವಿಸಿದ್ದರೆ
ವರ ತಪೋವ್ರತಗಳನು ನಿಯಮದಿ
ವಿರಚಿಸಿದ್ದರೆ ಪತಿಯೆ ಗತಿಯೆಂದೆನುತ ಮನದೊಳಗೆ ।
ಇರಲು ಸುರಪತಿ ಕೇಳು ನಿನ್ನಯ
ಕರುಣದಿಂದಲಿ ಮತ್ಪತಿಯನನು
ಸರಿಸುವೆನ್ನಯ ಗತಿಗೆ ತಡೆಯಿಲ್ಲೆಂದಳಾ ಸಾಧ್ವಿ ॥ ೧೨

ಏಳು ಹೆಜ್ಜೆಗಳಿಂದ ಮೈತ್ರಿಯು
ಮೇಳವಿಸಿದುದು ನಿನಗೆ ನಿನ್ನೊಳು
ಕೇಳುವರಲಾ ಬುಧರು ಸತ್ಯಂ ಸಾಪ್ತಪದವೆಂದು ।
ಬಾಲೆಯೆನ್ನುತುಪೇಕ್ಷಿಸದೆ ನೀ
ಪಾಲಿಸೆನ್ನೀ ಬಿನ್ನಪವನೆಂ
ದಾ ಲತಾಂಗಿಯು ನುಡಿದಳಂತಕನೊಡನೆ ವಿನಯದಲಿ ೧೩

ಧರಣಿಯೊಳು ನಾಲ್ಕಾಶ್ರಮಂಗಳೊ
ಳಿರದು ಮೂರನೆಯಾಶ್ರಮಂಗಳು
ಪರ ಗತಿಗೆ ನೆರೆ ಸುಕರ ಸಾಧನಗಳು ವಿಚಾರಿಸಲು ।
ತರಣಿಜನೆ ಮತ್ಪತಿಯನೊಯ್ವಾ
ವ್ರರುತರಾಶ್ರಮ ಧರ್ಮ ಲೋಪವ
ವಿರಚಿಸದಿರೆನಗೆಂದು ಬಿನ್ನೈಸಿದಳು ಸಾವಿತ್ರಿ ॥ ೧೪

ತರುಣಿ ಕೇಳೌ ಸ್ತ್ರೀಯರಾಗಲಿ
ಪುರುಷರಾಗಲಿ ಧರ್ಮ ಸಾರದ
ನಡೆದವರೆ ಜಗದೊಳಗೆ ಪೂಜ್ಯರು ನೀನು ನುಡಿದುದಕೆ ।
ಒಲಿದು ಮೆಚ್ಚಿದೆನೀಗ ನಾಂ ನಿ
ನ್ನರಸನನು ಹೊರತಾಗಿ ಮಿಕ್ಕಿನ
ವರವ ಬೇಡೌ ಕೊಡುವೆನೆಂದನು ಕಾಲನೊಲವಿನಲಿ ॥ ೧೫

ವರವನೀಯುವ ಮನವು ನಿನಗಿರೆ
ಸುರವರನೆ ಕೇಳಂಧನಾಗುತ
ಲಿರುಗೆಂ ಹೃತರಾಜ್ಯನಾಗಿ ವನಾಂತದೊಳು ತಪವ ।
ಚರಿಸುತಿರುತಿಹ ನನ್ನ ಮಾವಗೆ
ಕರುಣಿಸೈ ಕಣ್ಗಳನು ಮತ್ತುರು
ತರದ ರಕ್ಷೆಯನೆಂದು ಬಿನ್ನೈಸಿದಳು ಸಾವಿತ್ರಿ ॥ ೧೬

ತರಳೆ ಕೇಳ್ ಪ್ರಾರ್ಥಿಸಿದ ವರವನು
ಕರುಣಿಸಿದೆನೌ ನೀನು ಹಿಂದಕೆ
ತಿರುಗು ಬಳಲಿಕೆಯಾಂತೆ ನಿನ್ನಯ ಪರಿಯ ನೋಡಲ್ಕೆ ।
ಹಿರಿದು ಮರುಗುವುದೆನ್ನ ಮನವೆಂ
ದೊರೆಯುತೊಡನಾ ಧರ್ಮರಾಜಗೆ
ತರುಣಿಮಣಿ ತಾನಿಂತು ನುಡಿದಳು ವಿನಯ ವಚನದಲಿ ॥ ೧೭

ಶ್ರಮವು ತಾನೆಲ್ಲಿಯದು ನಿನ್ನಯ
ರಮಣನೆಡೆಬಿಡದಿರುವ ನನಗು
ತ್ತಮವಹೀ ಪತಿಗತಿಯನನುಸರಿಸುವುದು ಸತಿಯರಿಗೆ ।
ರಮಣನನು ನೀನೆಲ್ಲಿಗೊಯ್ಯುವೆ
ಗಮಿಸುವೆನು ನಾನಲ್ಲಿಗವನೊಡ
ನಮರವರ ಲಾಲಿಪುದು ಬಳಿಕಿನ್ನೊಂದು ಬಿನ್ನಪವ ॥ ೧೮

ಧರಣಿಯೊಳಗೆ ಮಹಾರಸಲು ನ
ಶ್ವರದ ಪರ್ವತಗಾತ್ರದಿಂದಲಿ
ದೊರೆಯುವುವು ಜನಗಳಿಷ್ಟಸಿದ್ಧಿಗಳದರ ಸಂಗತಿಯು |
ದೊರೆದ ಮನುಜರಭೀಷ್ಟ ಸಿದ್ಧಿಗೆ
ಕೊರತೆಯುಂಟೆ ಜಗದ ಸುಜನರ
ನೆರವಿನೊಳಗಿರಬೇಕು ಜೀವಿಗಳೆಂದರೆಂದುಮಾಯು | ೧೯

ಮಹಿಮೆಯಿಂದಲೆ ನಿನ್ನ ನುತಿ ಸುಮ
ನೋಡುಕೊಳ್ಳುವ ಬುದ್ಧಿ ವರ್ಧನ
ಮಾನಸನೀಯುವ ಹಿತಕರವು ಮೋಕ್ಷ ರಾಜ್ಯವಿದು ನಿಜವು |
ಸಿಹಿಯನ ಜೀವಿತವನುಳಿದಿ
ಸ್ನೇಹವಾದರು ವರದ ಜೇಡು ನು
ನೋಡು ಬಾಗಿಲೊಳೀನಿನಿಂದಿನ ಸುಖಿಸಲು ಸಾಧ್ಯ | ೨೦

ಅಂಗದಮಹಿಮಾ ರಾಜ್ಯದ
ಸುರಳ ಪಶ್ಚಿಮಂತೆನ್ನ ಮಾನವ
ಧರೆಯೊಳು ನೋಡೆನ್ನ ಜನಕನು ತಾಂ ಸ್ವರ್ಗವಾದಲಿ |
ಬಿರುಸಾಗಿರುವಂತೆ ವರವನು
ಕರುಣಿಸುವ ಹಿತನಲು ಕೊಟ್ಟನು
ತರಳ ಹಿಂದಕೆ ತಿರುಗಿ ಬಳಲಿದಿಂದನಂತಕನು || ೨೧

ಈ ಸುಖದ ಮಾನವರಿಗೆಲ್ಲ ನಿ
ಮಾನುಕನು ಹೀನಿಸಿ ಧರ್ಮದಿ
ನೀವುಸುತ ಪರಲೋಕಗಳ ಕಲ್ಪಿಸುವಿಯುದರಿಂದ |
ಧಾರುಣಿಯಜನೆ ನಿನ್ನೊಳಗೆ ಯುಮ
ಸಾಮುನಿಮ ಸಾರ್ಥಕನಲೀ ಎಮ
ತಾ ಮಹಾನತಿ ಮತ್ತೆ ಬಿನ್ನೈಸಿದಳು ತರಳೆಜಗೆ || ೨೨

ಕಾಯ ವಾಙ್ಮನಸದಿ ಸುಜನರು
ನ್ಯಾಯವನೆ ತಾನೆಸಗುತಿರ್ಪರರು
ಶ್ರೇಯವನು ಬಯಸುವರು ಪರರಿಗೆ ಬೇಡಿದುದನೊಲಿದು ।
ಈಯುವರು ಲೋಕದೊಳು ತಪ್ಪನು
ನೋಯಿಸಿದ ವೈರಿಗಳನಾದರು
ನೋಯಿಸದೆ ಕಾಯುವರು ನೆರೆ ನಿಸ್ವಾರ್ಥಭಾವದಲಿ ॥ ೨೩

ನೀರನೀಂಟಿದಂತಾದುದೌ ಬಾ
ಯಾರಿದವಗೀ ನಿನ್ನ ನುಡಿ ಮನ
ದಾರೆ ಸಂತಸವಾಂತೆನೀತನ ಹರಣ ಹೊರತಾಗಿ ।
ಸಾರ ಮತಿಯಿನ್ನೇನು ನಿನ್ನ ಮ
ನೋರಥವು ಬೇಡೆನಲ ಕಾಲನು
ಧೀರ ಮಾನಸೆ ಪುತ್ರಿ ನುಡಿದಳು ವಿನಯ ವಚನದಲಿ ॥ ೨೪

ಸೂರಸುತ ಕೇಳಿನ್ನ ಪಿತಗೆ ಕು
ಮಾರರಿಲ್ಲದರಿಂದಲಾತಗೆ
ನೂರುಮಂದಿ ಕುಮಾರರುದಿಸುವ ವರವ ಕರುಣಿಸೆನೆ ।
ಸಾರಮತಿ ನಾಂ ಕೊಟ್ಟೆ ನಡೆ ಬಹು
ದೂರ ಬಂದೌ ಎನಲು ಕಾಲನು
ಚಾರಮತಿ ಸತಿ ಬಳಿಕ ನುಡಿದಳು ಧರ್ಮರಾಜನೊಳು ॥ ೨೫

ಘನ ಮಹಿಮ ಕೇಳ್ ಲೋಕ ಲೋಚನ
ನೆನಿಸಿ ಮೆರೆವ ವಿವಸ್ವತಗೆ ನೀಂ
ತನಯನೆನಿಪುದರಿಂದ ವೈವಸ್ವತನು ನೀನೆನಿಪೆ ।
ಅನಿಶಮುಂ ಪ್ರಜೆಗಳನು ಧರ್ಮದೊ
ಳನಘಗುಣ ನೀಂ ನಡಸುವುದರಿಂ
ನಿನಗೆ ಸಲ್ಲುದು ಧರ್ಮರಾಜನೆನಿಪ್ಪ ನಾಮವದು ॥ ೨೬

ತರುಣಿಜನಕೆ ಕೇಳ್ ತನ್ನೊಳಗೆ ತನ
ಗಿರುವ ಹಿತಚಿಂತನೆಗು ಮಿಗಿಲೆನಿ
ಸಿರುವ ಹಿತಚಿಂತನೆಯ ಮಾಳ್ಪರು ಪರಗೆ ಸಜ್ಜನರು ।
ಧರೆಯೊಳದು ಕಾರಣದಿ ಮಿಗೆ ಸ
ತ್ಪುರುಷ ಸಂಗತಿವಡೆದ ಜನರಿಗೆ
ಕೊರತೆಯೆಂಬುದು ಬಾರದೈ ತಾನೆಂದಳಿಂದುಮುಖಿ ॥ ೨೭

ತರುಣಿಮಣಿ ನೀನೆಂದ ಮಾತಿಗೆ
ಸರಿಯೆನಿಪುದೊಂದುಂಟೆ ಜಗದೊಳು
ಹಿರಿದು ಸಂತಸವಾಂತೆ ಮನದೊಳು ನಿನ್ನ ವಚಃಭನ ।
ಹರಣವಿದು ಹೊರತಾಗಿ ಮಿಕ್ಕಿನ
ವರವ ಬೇಡೆನಲಿಂತಕನು ತ
ತ್ತರಣಿಜಂಗಭಿನಮಿಸಿ ಬಿನ್ನವಿಸಿದಳು ಸಾವಿತ್ರಿ ॥ ೨೮

ಘನ ಮಹಿಮ ಸತ್ಯಾತ್ಮ ಕೇಳ್ ನೀ
ನಿನಗೆ ನೂರ್ವರು ಪುತ್ರರುದರದಿ
ಜನಿಸುವಂದದಿ ವರವ ಕರುಣಾನಿಧಿಯೆ ಕರುಣಿಸೆನೆ ।
ಘನ ಪತಿವ್ರತೆ ನಿನ್ನ ಬಸಿರೊಳು
ತನಯರನಿಬರು ಜನಿಸುವರು ಪೋ
ಗೆನಲು ಬಲುಮುದವಾಂತು ನುಡಿದಳು ಬಳಿಕ ಸಾವಿತ್ರಿ ॥ ೨೯

ಕ್ಷಿತಿ ರಸಾತಲಕಿಳಿದರೆಯು ಪ
ರ್ವತಗಳಲ್ಲಾಡಿದರು ಸೂರ್ಯನ
ಗತಿಯು ನಿಂತರು ಜಗದಿ ಸುಜನರ ಧರ್ಮ ವರ್ತನೆಗೆ ।
ಚ್ಯುತಿಯು ಬಾರದು ಸಜ್ಜನರ ಸಂ
ಗತಿಯದೆಂದಿಗು ವಿಫಲವಾಗದು
ಹಿತವ ಮಾಡುವುದಿಹಪರಂಗಳೊಳೆಂದಳಾ ಸಾಧ್ವಿ ॥ ೩೦

ಮರೆಯ ಹೊಕ್ಕಂಗಭಯವೀಯುತೆ
ಪೊರೆಯುವರು ಬಲುಕರುಣದಿಂದಲಿ
ಪರರಿಗುಪಕರಿಸುವುದೆ ಶಾಶ್ವತ ಧರ್ಮವೆಂದೆನುತ ।
ಅರಿದು ನಡೆವರು ಮನದಿ ಗರ್ವವ
ದಿರುವರ್ಗೆ ಸತ್ಪುರುಷರವರಿಂ
ಧರೆಯೊಳವರನು ಸೇರ್ದ ಜನರಿಗೆ ದುಃಖವಿಲ್ಲೆಹುದು ॥ ೨೧

ಅವರ ಸತ್ಯದಿ ಚರಿಸುವನು ರವಿ
ಯವರ ಸತ್ಯದಿ ಭೂಮಿ ನಿಂತಿಹು
ದವರ ತಪದಿಂ ಕಾಲಕಾಲದಿ ಮಳೆ ಬೆಳೆಗಳಹವು ।
ಅವರೆ ಲೋಕೋದ್ಧಾರಕರು ನಿಜ
ವವರನುಗ್ರಹ ವಿಫಲವಾಗದು
ದಿವಿಜ ವರ ನೀಂ ಲಾಲಿಸೆಂದುಸಿರಿದಳು ಸಾವಿತ್ರಿ ॥ ೨೨

ಆ ನುಡಿಗೆ ತಲೆದೂಗಿ ಜವನೆಲೆ
ಮಾನಿನೀಮಣಿ ಮೆಚ್ಚಿದೆನು ನೀ
ನೇನನಾದರು ಬೇಡು ಕೊಡುವೆನು ವರವನೆಂದೆನಲು ।
ಮಾನವತಿ ಮನದೊಳಗೆ ಬಲುಸು
ಮ್ಮಾನವಾಂತು ನಿಜಾಶಯವನಾ
ಭಾನುಜಂಗಭಿನಮಿಸಿ ಬಿನ್ನವಿಸಿದಳು ವಿನಯದಲಿ ॥ ೨೩

ಸುರವರನೆ ಕೇಳೆನ್ನ ಮನದೊಳ
ಗಿರುವಭಿಪ್ರಾಯವನು ಪೇಳ್ವೆನು
ಧರೆಯೊಳಗೆ ಪತಿಹೀನೆಯಿದ್ದರು ಮೃತೆಯು ತಾನಲ್ತೆ ।
ಕರುಣಿಸದರಿಂ ಪತಿಯು ಜೀವಿಸ
ವರವ ಬೇರಿನ್ನಾವುದನು ನಾ
ನರಿಯೆನೆಂದಂತಕಗೆ ಮತ್ತಿಂತೆಂದಳಿಂದುಮುಖಿ ॥ ೨೪

ಪತಿಹೊರತು ಬೇರೊಂದು ಸುಖವನು
ಪತಿಹೊರತು ಬೇರೊಂದು ಗತಿಯನು
ಪತಿಹೊರತು ಬೇರೊಂದು ಪದವಿಯ ಬಯಸೆನ್ನೆಯೆನಗೆ ।
ಶತ ತನಯರಿರಲು ಪರಮಪತಿವ್ರತೆ
ಪತಿಯುತೆಗೆನಗೆಂತು ಘಟಿಪುದು
ಪತಿಯ ಕರುಣಿಸೆ ನಿನ್ನ ವಚನವೆ ಸತ್ಯವಹುದೆನಲು ॥ ೩೫

ಹರುಷದಿಂದಂತಾಗಲೆನ್ನುತ
ಕರದ ಪಾಶವ ಕಳೆದು ಜವನಿಲಿ
ತರುಣಿ ನಿನ್ನಯ ಪತಿಯ ಬಿಟ್ಟೆನು ಪೋಗು ಸುಖದಿಂದ ।
ಅರಸನಾಗೀ ಸತ್ಯವಂತನು
ಧರಣಿಯೊಳ್ ನಾನೂರು ವರುಷದ
ವರೆಗು ಜೀವಿಸಿ ಪಡೆವ ನಿನ್ನೊಳು ಶತಸುತರ್ಕಳನು ॥ ೩೬

ಪರಿಕಿಸುತ ಬಲು ಯಜ್ಞ ಪಾಶವ
ಧರೆಯೊಳು ಸದ್ಧರ್ಮದಿಂದಲಿ
ಸ್ಥಿರದ ಕೀರ್ತಿಯ ಪಡೆದು ಮೆರೆವನು ತತ್ತ್ವಸೂಭವರು ।
ಉರುಪರಾಕ್ರಮರಾಗಿ ಬಾಳ್ವರು
ತರಳರ್ ನಿನ್ನಿನುತಿತ್ತು ವರವನು
ಹರುಷ ಮಿಗೆ ತೆರಳಿದನು ನಿಜಪುರಕರಸ ಕೇಳೆಂದ ॥ ೩೭

೬ನೆಯ ಆಶ್ವಾಸ

ಸೂಚನೆ || ಪಡೆದು ಜೀವನ ಸತ್ಯವಂತನು
ಮಡದಿಮಣಿಯೊಡಗೂಡಿ ಜವದಿಂ
ನಡೆದನಿರುಳೊಳೆ ವೃದ್ಧ ಜನನೀಜನಕರಾಶ್ರಮಕೆ ||

ಎಲೆ ನೃಪತಿ ಕೇಳ್ ಪತಿಯ ಡಿಂಬದ
ಬಳಿಗೆ ಬಂದಂಕದೊಳಗಾತನ
ತಲೆಯನಿಟ್ಟವಲೋಕಿಸಲ್ ಸಾವಿತ್ರಿಯಾ ಕ್ಷಣದಿ |
ಮಲಗಿದವರೇಳ್ವಂತೆ ಸಂಜ್ಞೆಯ
ತಳೆಯುತಿರ್ದಾ ಸತ್ಯವಂತನು
ಲಲನೆಯೊಡನಿಂತೆಂದನಚ್ಚರಿವಡೆದು ಮನದೊಳಗೆ || ೧

ಮಲಗಿದೆನು ಬಲುಹೊತ್ತು ನಾನೆಲೆ
ಲಲನೆ ನಿನ್ನಂಕದೊಳಗೆಬ್ಬಿಸ
ದುಳಿದ ಕಾರಣವೇನದಂತಿರಲಾವನೋ ಎನ್ನ |
ಬಲುಹಿನಿಂದಲಿ ಕಟ್ಟಿ ಪಾಶದಿ
ಸೆಳೆದನಲ್ಲಾ ಜಲಧರಶ್ಯಾ
ಮಳ ಶರೀರನದಾರು ಪೇಳೆಂದೆನುತ ಬೆಸಗೊಂಡ || ೨

ಇದು ಕನಸೊ ಮೇಣ್ ನಿಜವೊ ಕಾಣೆನು
ಹೃದಯ ವಲ್ಲಭೆ ಪೇಳೆನಲ್ಕಾ
ಸುದತಿ ನುಡಿದಳು ವಲ್ಲಭನೆ ಬಾಳಿಪುದು ನಿನಗಿದರ |
ಹದನವೆಲ್ಲವ ನಾಳೆ ಪೇಳ್ವೆನು
ಮುದುಕರಾಗಿಹ ನಿಮ್ಮ ಪಿತೃಗಳು
ಕುದಿವರಿಂತೆಲೆ ಮನದಿ ನಾವಾಶ್ರಮಕೆ ಪೋಗದಿರೆ || ೩

ಇರುಳು ಬಳಿಸಾರುತಿರೆ ರಾತ್ರಿಂ
ಚರರು ತಿರುಗುವ ಹೊತ್ತಿನತಿಭೀ
ಕರ ಮೃಗಾಶ್ರಯ ವಿಪಿನವಿದು ಗಾಢಾಂಧಕಾರದಲಿ ।
ಅರಿಯಲಾಗದು ದಿಕ್ಕುಗಳನಿ
ಲ್ಲಿರುವ ಮನೆ ನಿಮಗುಂಟೆ ಪೇಳೆನ
ಲರಸಿಯೊಡನಾ ಸತ್ಯವಂತನು ನುಡಿದನೊಲವಿನಲಿ ॥ ೪

ಮೊದಲಿ ವಿಪಿನವಿದು ಭಯಂಕರ
ವಿದರ ಮೇಲತಿಗಾಢ ತಮದಿಂ
ಪುದಿದಿಹುದು ಪೋಗುವರೆ ಮಾರ್ಗವೆ ತೋರದಿಹುದದರಿಂ ।
ಹೃದಯವಿದು ಕಂಪಿಸುವುದೆನಗಂ
ಸುದತಿಯೀ ಪಲ್ಲವದೊಲಿರುವೀ
ಮೃದು ಪದದಿನೆಂತುಂ ನಡೆಯುವಳೊ ಹೇಳು ನೀನೆಂದ ॥ ೫

ಅರಸ ಕೇಳಂತಾದೊಡಿದೊ ಮುಂ
ದುರಿಯುತಿರ್ಪೀ ಕಾಡು ಮರದಿಂ
ಭರದೊಳಗ್ನಿಯ ತಂದು ಪೊತ್ತಿಸಿ ತಮವ ಕಳೆಯುವೆನು ।
ತಿರದ ಪೇದನೆಯಿಂದ ಚರಿಸುವ
ಪರಿಯದೆಂತಿನನುದಿಸೆ ಬಳಿಕಲಿ
ತೆರಳುವೆವು ನಾವೆಂದು ನುಡಿದಳು ಸತಿಯು ನಿಜಪತಿಗೆ ॥ ೬

ಎಲೆ ಮಡದಿ ತಲೆನೋವು ಕಳೆದುದು
ಬಳಲಿಕೆಯು ನನಗಿಲ್ಲ ನೀನೆ
ನ್ನೊಳಗೆ ದಯವಿಟ್ಟೆ ಮಾತೃಪಿತೃಗಳ ನೋಡಿ ಸುಖಿಸುವೆನು ।
ಜಲಜಮುಖಿ ಕೇಳಾತ್ಮನಪ ನಾ
ನುಳಿದು ನಿಂತವನಲ್ಲವೆಲ್ಲಿಯು
ಕಳವಳಿಸುವರು ತಾಯಿತಂದೆಗಳೆನ್ನ ಕಾಣದಿರೆ ॥ ೭

ಜಗಲೀಶಗು ನಾಂ ತನುಹಿಡಿದು
ನ್ನಗಳಿಕೆಯು ಓತನಿಸಿಸು ನಹಿಸದಿ
ಬಗೆದೊಳಳುಕುತ ಮುನಿಗಳೊಡನರಸುತ್ತ ಬಂದಿನ್ನ ।
ನಿಗಗದ ಕಂಡೊಡನೆಲ್ಲ ಬಿಗಿ ನಾ
ಮಗನೆ ಬಲುಸೊನ್ನೆಕೆ ಸಿಂತೆ
ಜಗದಣದ ಸೀಂ ಗೈದಿದುನ್ನುತ ಮುದಗುತನದಿಂ । ೮

ಬೇಗ ನಾನಾತ್ರ ಮುಕೆ ನತಿ ತೇಳ್
ಪ್ರೋಗದಿರಲಿನ್ನಗಲಿಕೆಯು ಬಲು
ಬೇಗೆಯುಂಟೇನಾಗುವರೊ ಮತ್ತಿತ್ರಗಳದನರಿಯೆ ।
ಈಗಲಿನ್ನಯು ಬಗೆಯೊಳಂ ಬಲು
ಬೇಗುದಿಯು ಜನಿಸಿಹುದಕಟ ಮುಂ
ದೇನುಗತಿಯೊ ನಾನದರ ತಿಳಿದಿರಲಾರೆ ಪಿಸಿನದೊಳು । ೯

ನಂದನರು ಬಿಗೆ ತನ್ನ ನಲಿವಿನ
ಲಿಂದು ಪಡೆಯುವರಿತ್ತಿ ಲೋಕದಿ
ತಂದೆತಾಯ್ಗಳು ನಾನವರ ಚಿತ್ತಕ್ಕೆ ಸಂದುಗದ ।
ತಂದ ನೋಲಿನ್ನು ಬಿಸಿ ಫಲದೆ
ಸಿಂದುನುಬಿರುಂತಲಿಪರೊ ನಾ
ನೆಂದು ನಿಮಿಸಲು ತಿಳಿದದರ ಚೀಪಿಸುವನಕ್ಕಿನುತ । ೧೦

ಮನನಿಲು ಬಿರಾಗೆ ಫನ ತೆರ
ನನವ ಮಾಡಿದನಲ್ಲ ಜನ್ನ
ಜನಕ ಭಕ್ತನು ಸತ್ಯವಂತನು ಧರ್ಮಜನ ತೆಲ್ಲೆ ।
ಬಸಿಯುನಾಸ್ಯದೊಳಗುವ ಕನ್ನೆ
ಪ್ಪನಿಗಳನು ತಾಂ ತೋರಿದನು ನೆರಗಂ
ಏನೆಯು ಬಿಗೆ ಸಂತ್ರಿಸುತಿಂದನು ಬಳಿಕಸಾವಿತ್ರಿ । ೧೧

ಪತಿಯೆ ಪರ ದೇವತೆಯೆನುತ್ತಾ
ಮತಿಯೊಳಗೆ ನಾಂ ಭಾವಿಸಿರ್ದಡೆ
ನುತ ತಪೋವ್ರತಗಳನು ರಚಿಸಿರ್ದಡೆ ಸುಭಕ್ತಿಯೊಳು ।
ಕ್ಷಿತಿಯೊಳಗೆ ನಮ್ಮತ್ತೆಮಾವರಿ
ಗತಿಹಿತವು ತಾನಾಗಲಿರುಳೆ
ನ್ನುತ ಸುಭಕ್ತಿಯೊಳಿಷ್ಟ ದೇವತೆಯನ್ನು ಭಜಿಸಿದಳು ॥ ೧೩

ಇನಿಯ ತೋರಿಪ್ಪುದೇಕೆ ನಿನ್ನಯ
ಜನಕನುಂ ಪೇಳ್ದಾ ಜನನಿಯುಂ ತಾ
ವನ್ಯತಪಾಡಿದರಲ್ಲವೆಂದುಂ ಸತ್ಯವಂತರಿಗೆ ।
ಜನಿಸಲರಿಯದು ಕಷ್ಟ ನಿಜವನ
ರಸಘ ಸತ್ಯವೆ ಕಾವುದೆನ್ನನು
ಮನದ ದುಗುಡವನುಳಿಯೆನುತ ಸಂತೈಸಿದಳು ಪತಿಯ ॥ ೧೪

ಮನವು ಕಳವಳಿಸುವುದು ಜನನೀ
ಜನಕರನು ನೆನೆನೆನೆದು ಕೇಳ್ ಪ್ರಿ
ಯನಿತೆಯಮಳಾಂಗಾಂಗನಾದರು ಕೇಡು ಸಂಭವಿಸೆ ।
ತನುವ ಧರಿಸುವನಲ್ಲ ನಾಂ ನೀ
ನೆನಗೆ ಹಿತವನು ನನ್ನ್ವಾದರೆ
ವನದಿ ನಿಲ್ಲುವುದನುಚಿತವು ನಡೆಯೆಂದನಾಶ್ರಮಕೆ ॥ ೧೫

ಮಡದಿಮಣಿ ಕೇಳ್ದೊಡನೆ ತನ್ನಯ
ಮುಡಿಯ ನವನಿಸಿ ಕಟ್ಟಿ ಕರದಿಂ
ಪಿಡಿದು ನಿಜವಲ್ಲಭನ ತೋಳ್ಗಳನೆತ್ತಿ ಬಳಿಕಿನಲಿ ।
ಮಡಗಿದಾ ಫಲಪೂರ್ಣ ಪುಟಿಕೆಯ
ಕೊಡುವುದೆನಲಿದ ನಾಳೆ ಕೊಂಬೆವು
ನಡೆಯಿರೆನ್ನುತ ಗಿಡಕೆ ತಗುಲಿಸಿ ನಡೆದಳಿನನೊಡನೆ ॥ ೧೬

ಜನಪನಂದನೆ ಮೊದಲೆ ಮೌನ ವ್ರತವು
ತನುವಿನಲ್ಲಿದೆ ನಾಲ್ಕು ದಿನದಿಂ
ದನಶನವ್ರತೆಯಾದಳೆಯು ಪತಿಸೇವೆಗಲಸಿದಳೆ |
ಮನದೊಳಾದರು ಬೇಸರಿಸಿದಳೆ
ಘನ ಪತಿವ್ರತೆ ನಿಜ ಕರಾಲಿಂ
ಜನನಿ ಪತಿಯನು ನಡೆಸಿಕೊಂಡೈದಿದಳು ವಿಪಿನದಲಿ || ೧೬

ಲಲನೆಗೆಂದನು ಸತ್ಯವಂತನು
ಜಲಜಮುಖಿ ನಂದನವೆಲೆಗಳಂತರ
ದೊಳಗೆ ಬಿದ್ದಿಹ ಚಂದ್ರಕಿರಣದಿ ಬಂದ ಮಾರ್ಗವನು |
ತಿಳಿಯುವೆನು ನೀಂ ನೆಲನ ನೋಡುತ
ತಳವೃಗಪತಿವ್ಯಮನೆನಿಪ ನಿನ್ನಡಿ
ಗಳಿಗೆ ಕಲ್ಮುಳ್ಳುಗಳ ತಾಕಿ ಸಂಘಟಿಸದಂದದಲಿ || ೧೭

ಜನಪ ಕೇಳತಿವೃದ್ಧ ಜನನೀ
ಜನಕರನು ತಾಂ ನೋಳ್ಪ ತವಕದಿ
ಘನ ಕಠೋರ ವನಾಂತದೊಳು ನಟ್ಟಿರುಳೊಳುಂ ಜವದಿ |
ವನಿತೆಯೊಡಗೂಡಿಂತು ನಡೆದನು
ಮನದ ಭಕ್ತಿಯದೆಂತೊ ಪಿತೃಗಳೊ
ಳನಘ ಗುಣನಿಧಿ ಸತ್ಯವಂತನು ಜಗದೊಳೆಣೆಸಲ್ತೆ || ೧೮

೭ನೆಯ ಆಶ್ವಾಸ

ಸೂಚನೆ || ಅನುಪಮೈಶ್ವರ್ಯವನು ಪತಿಯೊಡ
ನನುಭವಿಸುತಾನಂದ ಮಿಗೆ ಸಂ
ತನರ ನೂರ್ವರ ಪಡೆದು ಬಾಳ್ದಳು ಸುಗುಣೆ ಸಾವಿತ್ರಿ ||

ಜನಪ ಕೇಳ್ ಸತ್ಯವಂತನ
ಜನಕನಚ್ಚರಿವಡುತ ಕಣ್ಗಳು
ತನಗೆ ಬಂದುದನರಿದು ಬಳಿಕಲಿ ಕಾಂತೆಯೊಡಗೂಡಿ |
ತನುಭವನು ತಾಂ ಫಲವ ತರೆ ಕಾ
ನನಕೆ ಪೋದನಸಕ್ಕಟಾ ಬರ
ಲಿನಿತು ಪೊತ್ತೇಕೆನುತ ಮನದೊಳು ಪಿರಿದು ಚಿಂತಿಸಿದ || ೧

ಸರಿಯುತಿಹ ಸೋಗ್ ಪುಣ್ಯ ನದಿಗಳ
ಪರಿಸರದ ಮುನ್ಯಾಶ್ರಮಂಗಳ
ಮೆರೆಯುತಿಹ ವನ ಗಿರಿ ನಿತಂಬದಿ ಪುಷ್ಪವಾಟಿಯಲಿ |
ಅರಸರಸಿ ಹಂಬಲಿಸಿ ತನಯನ
ಬರವ ಕಾಣದೆ ಮರುಗಿ ಮನದೊಳು
ಚರಿಸುತಿರ್ದರು ದಂಪತಿಗಳಾ ವಿಪಿನ ಮಧ್ಯದಲಿ || ೨

ತರಗೆಲೆಯು ಗರಕೆನಲು ಫಕ್ಕನೆ
ತಿರುಗಿ ನೋಳ್ಪರದೆಲ್ಲಿರುವೆ ಬಾ
ತರಳ ಮೊಗದೋರೆಂದು ಪಲತೆರದಿಂದ ಹಲುಬುತಲಿ |
ಮರುಗುವರು ಕಳವಳಿಸುವರು ಕಾ
ತರಿಸುವರು ತೊಳಲುವರು ತನುಭವ
ನಿರವ ನೆಲೆಯನು ಕಾಣದಾ ದಂಪತಿಗಳಡಿಗಡಿಗೆ || ೩

ಎಲೆ ತ್ರಿಲಕ ಸುಕುಮಾರ ತಿಲಕನು
ತಳೆರ್ದನನ್ನಗೆ ಪೋಕಶೋಕನೆ
ನೆಲದೊಳಿಪ್ಪ್ರನಶೋಕರಂ ಗೈದಣುಗ ತಾನೆನ್ನ ।
ಎಲೆ ರಸಾಲವೆ ನಮ್ಮ ಭೀಷ್ಟವ
ಸಲಿಸುತಿಹ ಸುರಸಾಲಸಿರುತಿಹ
ನೆಲೆಯು ಪೋರೆನುತ್ತ ಹಂಬಲಿಸಿದರು ಪಲತೆರದಿ ॥

ಪರುಷತರ ಪಾಷಾಣ ಹತಿಯಿಂ
ಬಿರಿದ ತಮ್ಮಯ ಚರಣದಿಂ ಸುಗೆ
ಸುರಿವ ರಕುತವ ಲೆಕ್ಕಿಸದೆ ಕುಶ ಕಂಟಕಗಳಿಂದ ।
ತುರುಗಿದಂಗದ ನೋವನರಿಯದೆ
ಮರುಳರಂದದಿ ತಿರುಗಿದರು ಸುತ
ನಿರುವ ನೆಲೆಯನು ಕಾಣದರಸುತ ವಿಪಿನ ಮಧ್ಯದಲಿ ॥ ೧

ನೆರೆಯೊಳಿರ್ಪಾಶ್ರಮಿಗಳಂದದ
ರಿರವ ನೋಡಿ ತದಾಶ್ರಮಕೆ ಬಳಿ
ಮರುಕದಿಂದೊಡನೆಯ್ದಿ ಮುನ್ನಿನ ನೃಪರ ಚರಿತೆಗಳ ।
ಒರೆದು ಸಂತೈಸುತ್ತಲಿರೆ ಮೇಣ್
ಸ್ಮರಿಸಿ ಪುತ್ರನ ಬಾಲ್ಯ ಚರಿತವ
ಮರುಗುತಿರ್ದರು ಮನದಿ ತದ್ದಂಪತಿಗಳಡಿಗಡಿಗೆ ॥ ೬

ಧಾತ್ರಿಯರಸನೆ ನಿನ್ನ ಸೊಸೆ ಸುಚ
ರಿತ್ರೆ ಸೌಮಂಗಲ್ಯ ವಿಲಸಿತ
ಗಾತ್ರಿಯದರಿಂದವಳ ಸೌಶೀಲ್ಯಪ್ರಭಾವದೊಳು ।
ನೇತ್ರಗಳು ನಿನಗುದಿಸಿದವು ತವ
ಪುತ್ರನುಂ ದೀರ್ಘಾಯುಷ್ಯೆ ಸುಚ
ರಿತ್ರ ಹಲಬುಪ್ರದೇತಕೆಂದರು ಸಕಲ ಮುನಿವರರು ॥ ೭

ಕೂಗುತಿವೆ ಶುಭವಾಗಿ ಪಕ್ಷಿಗ
ಳಾಗುತಿವೆ ಸುನಿಮಿತ್ತವದರಿಂ
ರಾಗದಿಂದಲಿ ಸತ್ಯವಂತನು ಸತಿಯನೊಡಗೊಂಡು |
ಈಗಳೀ ಬಂದಪನೆನುತ್ತಾ
ಯೋಗಿವರರುಸಿರುತ್ತಿರಲ್ಕೊಡ
ನಾಗ ತವಕದಿ ಸತ್ಯವಂತನು ಬಂದನವರೆಡೆಗೆ || ೮

ಕಂದ ಬಂದೈ ಪ್ರೇಮ ರಸದು
ಕ್ಕಂದ ಬಂದೈ ಹೃದಯ ಪಿಕ ಮಾ
ಕಂದ ಬಂದೈ ಸತಿವೆರಸಿ ನೀನೆಂದು ಸಂತಸದಿ |
ನಂದನನನಿಕ್ಕೈಗಳಿಂದಾ
ನಂದಪುಗೆ ತಕ್ಕೈಸಿ ತೃಪ್ತಿಯ
ಹೊಂದಿದರು ಚಿತ್ತನೊಳಗಾತನ ತಾಯಿತಂದೆಗಳು || ೯

ಬಳಿಕಲಾ ಮುನಿವರರು ತನ್ನೃಪ
ತಿಲಕನನು ಬೆಸಗೊಂಡರೊಲವಿಂ
ಇಳಿಯರಸ ನಾವೆಂದ ವಚನವು ತಪ್ಪದಾಯಿತಲೆ |
ಕುಲ ವಿಭೂಷಣ ಪುತ್ರನನು ಮುಂ
ಗಳ ಚರಿತ್ರೆಯ ಸೊಸೆಯನುಂ ಕಂ
ಗಳನು ಪಡೆದಭಿವೃದ್ಧಿಯಾಂತ್ಯೆ ದೈವ ಕರುಣೆಯೊಳು || ೧೦

ಪೊಡವಿಯೊಡೆಯನೆ ನಿನ್ನ ರಾಜ್ಯವು
ನ್ನೊಡನೆ ದೊರೆವುದು ಪೂಜಿಸಂಗನೆ
ಯೊಡನೆ ಯಜ್ಞೇಶ್ವರನನೆಂದಾ ಧರಣಿಪತಿಯಿಂದ |
ನಡಸಿ ಯಜ್ಞೇಶ್ವರ ಸಮರ್ಚೆಯ
ಸಡಗರದಿ ಪಿತನೆಡೆಯೊಳಂಗನೆ
ಯೊಡನೆ ಕುಳಿತಿಹ ಸತ್ಯವಂತನೊಳೆಂದರೊಲವಿನಲಿ || ೧೧

ಎಲೆಗುಣಾಕರ ಸತ್ಯವಂತನೆ
ಚಲಿಸ ನೀಂ ವನಕೆಸೆತು ಕಾಲವು
ತಳುವಲೇನು ನಿಮಿತ್ತಮೀ ನಿಟ್ಟುಸಿರುಗಳಿಕ್ಕುತಿರಲು ।
ಬಲಿದ ಕಾರ್ಯವದಾವುದೀತಕೆ
ತೊಳಲಿಸಿದೆ ನೀಂ ತಂದೆತಾಯ್ಗಳ
ನಲಿವು ಚರಿತನೆ ಪೇಳೆನುತ ಬೆಸಗೊಂಡೊಡಿಂತೆಂದ ॥ ೧೨

ಜನಕನಾಜ್ಞೆಯನಾಂತು ಪೋದೆನು
ಬನಕೆ ವನಿತೆಯ ಕೂಡಿ ಬಳಿಕಾ
ವನದಿ ಕಾಷ್ಠವ ಕಡಿಯುತಿರೆ ಸಂತಾಪವಾಯ್ತೆನಗೆ ।
ಇನಿಯಳಂಕದಿ ಮಲಗೆ ಬಂದುದು
ಘನ ಸುಷುಪ್ತಿ ಬಳಿಕ್ಕೆ ಪಿತೃಗಳ
ನೆನೆದು ತಪಿಸುವರೆಂದು ಬಂದೆನು ನಿಟ್ಟುಸಿರ್ಗಳೆನಲು ॥ ೧೩

ಏನಿದಚ್ಚರಿ ನಿನ್ನ ತಂದೆಗ
ದೇನು ಕಾರಣವಿಲ್ಲದಕ್ಷಿಗ
ಳೇನುದಿಸಿದುವು ಸಾಕು ಸಾಕಿನ್ನದಕೆ ಕಾರಣವ ।
ನೀನರಿಯೆ ತಿಳಿದಿರ್ಪಳಿವ ನಿಜ
ಮಾನಿನೀಮಣಿಯೆಂದು ಮುನಿಗಳು
ಸಾನುರಾಗದಿ ನೋಡಿದರು ಸಾವಿತ್ರಿಯಾನನವ ॥ ೧೪

ಮುನಿವರರೆ ಲಾಲಿಪುದು ವಿನ್ನಯ
ಘನತರಾಶೀರ್ವಾದ ಬಲದಿಂ
ದನವಧಿ ವಿಪತ್ಸಾಗರವನುತ್ತರಿಸಿದುವನೆಂದು ।
ಮುನಿಪ ನಾರದನುಕ್ತಿ ಮೊದಲಾ
ಗಿನನ ಹರಣವ ಪಡೆದ ಕಥನವ
ವಿನಯದಿಂ ತಲೆವಾಗಿ ಬಿನ್ನವಿಸಿದಳು ಸಾವಿತ್ರಿ ॥ ೧೫

ಎಲೆ ಪತಿವ್ರತೆ ಭಾಪು ಪಾಪನ
ಜ್ವಲಧಿಮಗ್ನವದಾದ ಪಾವನ
ಕುಲವನುದ್ಧರಿಸಿದೆಯಲ್ಲದೆ ನಿನ್ನ ಪಿತೃಕುಲವ ।
ಸಲಿಲದೌ ನೀನಲ್ತೆ ಸದುಭಯ
ಕುಲ ಸಮುದ್ಧಾರಿಣಿಯೆನುತ ಮಂ
ಗಳ ಚರಿತ್ರೆಯ ಪೊಗಳಿದರು ತಮತಮಗೆ ಮುನಿವರರು ॥ ೧೬

ನಲವು ಮಿಗಲಾ ಸತ್ಯವಂತನ
ಲಲನೆಯನು ಪರಸುತ್ತ ತನ್ನಯ
ತಿಲಕನನು ಜತೆಗೊಂಡು ಪೋದರು ಮುನಿಗಳಾಶ್ರಮಕೆ ।
ಬೇಗ ತಲೆದೋರಿದುದು ಮೂಡಲು
ನಳಿನ ಸಖನೇರಿದನು ಪೂರ್ವಾ
ಚಲದ ಶಿಖರವ ನೃಪತಿಯಭ್ಯುದಯವನು ನೋಳ್ಪನೆನೆ ॥ ೧೭

ದಿನವನುದಿಸಿದ ಬಳಿಕಲಾ ಮುನಿ
ಜನರು ತಮ್ಮಯ ನಿತ್ಯಕರ್ಮಗ
ಳನು ರಚಿಸಿ ಮೇಣಾದ್ಯುಮತ್ಸೇನಾವನೀಪತಿಯ ।
ಸನಿಹಕೈದುತ ಸತ್ಯವಂತನ
ವನಿತೆಯನುಪಮ ಚರಿತೆಯನು ತಾಂ
ಮನದಣಿಯೆ ಕೊಂಡಾಡುತಿರ್ದರು ಪರಮ ಹರ್ಷದಲಿ

ಅರಸ ಲಾಲಿಪುದಿತ್ತ ಮಂತ್ರಿಗ
ಳರಿಗಳನು ರಣ ಮುಖದಿ ಭಂಜಿಸಿ
ಮರಳಿ ತಮ್ಮರಸನನು ರಾಜ್ಯದಿ ನೆಲೆಗೊಳಿಸಲೆಂದು
ಭರದಿ ಮೇಧ್ಯಾರಣ್ಯಕೈದಿದ
ರರಸು ಗತ ದೃಶನೆಂದು ಬಗೆದರಿ
ಧರೆಯೊಳಿವರಲಿ ರಾಜಭಕ್ತಿ ಧುರೀಣರಾದವರು ॥

ಅರಸನೆಡೆಗೈತಂದು ಕಣ್ಬಡೆ
ವಿರುವ ತೆರನನು ಕಂಡು ವಿವಿಧ
ಸ್ತವಿಸಡುತ ಸಂತೋಷದಿಂದವನಂಘ್ರಿಯುಗಳಕ್ಕೆ ।
ಎರಗಿ ನಿಮ್ಮ ಕುಲಕ್ರಮಾಗತ
ವರಸುತನವನು ಕೈಕೊಳಲು ನೀವ್
ಬರುವುದೆಂದಾ ಮಂತ್ರಿಗಳು ಬಿನ್ನೈಸಲೊಲವಿನಲಿ ॥ ೨೦

ಅಂದವರ ಸತ್ಕರಿಸಿ ಪಿಂಗೆ ಹೊ
ಸ್ಯಂದನವನೇರಲ್ಕೆ ಸೇವಿಸಿ
ನಂದನನು ಮೊದಲಾದವರನೊಲವಿಂ ದ್ಯುಮತ್ಸೇನಂ ।
ಬಂದು ಮುನಿ ಜನದೊಡನೆ ಕನಕ
ಸ್ಯಂದನವನಡರ್ದತುಲ ವೈಭವ
ದಿಂದ ಪೊಕ್ಕನು ರಾಜಧಾನಿಯುನರಸ ಕೇಳೆಂದ ॥ ೨೧

ಬಳಿಕಲಭಿಷೇಕಿಸಿದರಾತನ
ಕುಲಪುರೋಹಿತ ಸಚಿವ ಮುಖ್ಯರು
ಬಲು ಹರುಷದಿಂ ಯೌವರಾಜ್ಯದಿ ಸತ್ಯವಂತನನು ।
ನೆಲೆಗೊಳಿಸಲಾತಂಗೆ ತನ್ನಯ
ಲಲನೆಯುದರದಿ ಜನಿಸಿದರು ಮಂ
ಜುಳ ಗುಣಾಕರರಾದ ನೂರ್ವರು ಪುತ್ರರತಿಬಲರು ॥ ೨೨

ಜನಿಸಿದರು ಮೇಣಶ್ವಪತಿಗಂ
ತನಯರತವಿಂತುಭಯ ಕುಲವನು
ಜನಪ ಕೇಳುದ್ಧರಿಸಿದಳು ಸುಚರಿತ್ರೆ ಸಾವಿತ್ರಿ ।
ಅನಘವಾದೀ ಸಚ್ಚರಿತ್ರೆಯ
ಘನತರದ ಭಕ್ತಿಯೊಳು ಪಠಿಸಿದ
ಜನಕೆ ಸಿದ್ಧಿಪುದೀಪ್ಸಿತಾರ್ಥಗಳೆಂದನಾ ಮುನಿಪ ॥ ೨೩

ಸಾವಿತ್ರಿಯ ಚರಿತ್ರೆ ಸಂಪೂರ್ಣಂ

ಕ್ಲಿಷ್ಟಪದಗಳ ಅರ್ಥ

—೦೦—

೧ ನೆಯ ಆಶ್ವಾಸ

ಪದ್ಯಸಂಖ್ಯೆ: ಪದಗಳು ಮತ್ತು ಅರ್ಥ

೧ ಹೃದಯಾಬ್ಜ ಮಿತ್ರನೆ ಹೃದಯವೆಂಬ ಕಮಲಕ್ಕೆ ಸೂರ್ಯನಾದವನೆ

೨ ತೌರೂರಹ-ಜನ್ಮಸ್ಥಾನವಾದ

,, ಜನಪದ-ದೇಶ

೩ ನಿಕಾಮಮೆನೆ-ಅತಿಶಯವಾಗಿ

,, ನಿರತನು-ಆಸಕ್ತಿಯುಳ್ಳವನು

,, ಸೌಮನಸ್ಯ-ಒಳ್ಳೆಯ ಹೃದಯ

೪ ಕರಂ-ಹೆಚ್ಚಾಗಿ

೫ ಸದ್ಗುಣಧಾಮೆ-ಒಳ್ಳೆಯ ಗುಣಗಳಿಗೆ ಆವಾಸಸ್ಥಾನವಾದವಳು

೬ ಆಯತವೆನಲು-ವಿಸ್ತಾರವಾಗಿ

೭ ಪರೇಂಗಿತಜ್ಞ-ಇತರರ ಊಹೆಗಳನ್ನು ತಿಳಿಯಬಲ್ಲವನು

೮ ವಿಮುಖನು ಅದರ ಕಡೆ ತಿರುಗದವನು

೯ ಎಣೆ-ಸಮಾನ

,, ಅಸದಳ-ಅಶಕ್ಯ

ಕರುಣಾಪಾಲಿ-ಕರುಣೆಗೆ ಪಾತ್ರಿಯಂತಿರುವವಳು

೧೦ ಮಿಗೆ-ಅಧಿಕವಾಗಿ

,, ವನಧಿ-ಸಮುದ್ರ

,, ಅರಿದು-ತಿಳಿದು

,, ಇನಿಯಳು-ಪ್ರಿಯಳು

,, ಬೆಸಗೊಂಡನು-ಪ್ರಶ್ನೆಮಾಡಿದನು

ಪದ್ಯ ಸಂಖ್ಯೆ : ಪದಗಳು ಮತ್ತು ಅರ್ಥ

ಪದ್ಯ ಸಂಖ್ಯೆ	ಪದಗಳು ಮತ್ತು ಅರ್ಥ
೧೦	ನಗುವ ಮುಖ
,,	ಕಂಬನಿ-ಕಣ್ಣೀರು
೧೧	ಅಂಪ-ಧರಿಸುವ, ಪಡೆಯುವ
೧೨	ಅನಿತರೊಳಗೆ-ಅಷ್ಟರೊಳಗೆ
,,	ಅಣುಗ-ಶಿಶು
,,	ನೇಹ-ಸ್ನೇಹ, ವಾತ್ಸಲ್ಯ
,,	ಕೋಗಿಲು-ಮುಗಿಲು
೧೩	ವನಜಗಂಧಿ-ಕಮಲದ ಹಾಗೆ ಸುವಾಸನೆಯುಳ್ಳವಳು
,,	ಒರೆವುದು-ಹೇಳುವುದು
,,	ಆಮ್ನಾಯ-ವೇದ
೧೪	ಸಂತೈಸಿಕೊಳ್ಳು-ಸಮಾಧಾನಪಡಿಸಿಕೊ
೧೫	ಕಲ್ಪೋಕ್ತ-ಶಾಸ್ತ್ರದಲ್ಲಿ ಹೇಳಿರುವ
,,	ಉಕ್ತಕಾಲ-ಹೇಳಿದ ವೇಳೆ
	ನಿರಶನವ್ರತ-ಉಪವಾಸ
೧೬	ನೇಮ-ನಿಯಮ
,,	ಸೋಮಕುಲಜನೆ-ಚಂದ್ರವಂಶದಲ್ಲಿ ಹುಟ್ಟಿದವನೆ
೧೭	ಎರಗಿದನು-ನಮಸ್ಕರಿಸಿದನು
೧೮	ನಿಚ್ಚಲುಂ-ಯಾವಾಗಲೂ
,,	ಅಚ್ಚರಿಯ-ಆಶ್ಚರ್ಯವನ್ನು
೧೯	ಈಯಬೇಕು-ಕೊಡಬೇಕು
,,	ಕಾಯಬೇಕು-ರಕ್ಷಿಸಬೇಕು
೨೦	ಸಲಿಸಿರುವೆನು-ಕೊಟ್ಟಿರುವೆನು
೨೧	ಈ ಪರಿ-ಈ ರೀತಿಯ
೨೨	ತೆರದಿ-ಹಾಗೆ
,,	ಸಿತಪಕ್ಷ-ಶುಕ್ಲಪಕ್ಷ
,,	ಪರಿಕಿಸು ಬಗೆ-ಪರ್ಣಪಚ್ಚಲು

ಪದ್ಯ ಸಂಖ್ಯೆ : ಪದಗಳು ಮತ್ತು ಅರ್ಥ

೨೨ ನಲವಿನಿಂ-ಸಂತೋಷದಿಂದ
,, ಗೆಯ್ದನು-ಮಾಡಿದನು
೨೩ ತೊಳಗುವ-ಹೊಳೆಯುವ
,, ಅಣಕಿಸ ಹಾಸ್ಯಮಾಡುವ
,, ಸೊಗರುಗುವ-ಕಾಂತಿಯನ್ನು ಚೆಲ್ಲುವ
,, ಚೆಂದುಟಿಯು-ಕೆಂಪಾದ ತುಟಿಯು
,, ಬಗೆಯೊಳು-ಮನಸ್ಸಿನಲ್ಲಿ
,, ಅಡಿಗಡಿಗೆ-ಪದೇಪದೇ, ಆಗಾಗ
೨೪ ದಣಿಯರು-ತೃಪ್ತಿಪಡರು
,, ಮಿಗೆ-ಹೆಚ್ಚಲು
,, ನೀಡಿ-ಕೊಟ್ಟು
,, ಹರುಷಗಡಲು-ಸಂತೋಷ ಸಮುದ್ರ
೨೫ ಅಣುಗ-ಹುಡುಗ
,, ಮೂಡಿ-ಎದ್ದು
೨೬ ಅಖಿಲ ಕಳೆ-ಸಕಲ ವಿದ್ಯೆಗಳು
,, ಮನ್ನಣೆ-ಮರ್ಯಾದೆ
,, ಕುವರಿ-ಕುಮಾರಿ, ಮಗಳು
೨೭ ಅನುಗೊಳಿಸು-ಸೇರಿಸು
,, ಈವುದು ಕೊಡುವುದು
,, ಕಲ್ಪಲತೆ-ಸ್ವರ್ಗದಲ್ಲಿ ಕೇಳಿದುದನ್ನು ಕೊಡುವ ಮರ
೨೮ ಒರೆದ-ಹೇಳಿದ
,, ಆಗ್ರಹಿಸಿದರೆ-ಸಿಟ್ಟುಮಾಡಿದರೆ
೨೯ ಅರಿದು-ಅಸಾಧ್ಯ
,, ಬಹುದು-ಬರುವುದು
,, ಮೇಲುಮತಿಗೆ-ಶ್ರೇಷ್ಠವಾದ ಬುದ್ಧಿಗೆ
೩೦ ಉಸಿರಿದ-ಹೇಳಿದ

ಪದ್ಯಸಂಖ್ಯೆ: ಪದಗಳು ಮತ್ತು ಅರ್ಥ

೩೦ ಆಲಿಸುವಳು–ಕೇಳುವಳು
,, ಭಾವಿಸಳು–ಆಲೋಚಿಸುವಳು
,, ಪರಿಪರಿಯ–ನಾನಾ ವಿಧವಾದ
,, ಎರಗುತಿಹ–ಆಸೆಪಡುವ
,, ಬಲುಹಿಂ–ಬಲಾತ್ಕಾರದಿಂದ
೩೧ ಇನಿಸು–ಸ್ವಲ್ಪವೂ
,, ಬೇಸರ–ಉದಾಸೀನ, ಬೇಸರಿಕೆ
,, ಅನುದಿನವು–ನಿತ್ಯದಲ್ಲಿಯೂ
೩೨ ಮೇಲೆನಿಪ–ಅತಿಶಯವಾದ
೩೩ ಇನ್ನೇಂ–ಮತ್ತೇನು
,, ಒರೆವುವೆನೆ–ಹೇಳುವುವೋ ಎಂಬ ಹಾಗೆ
,, ಕುಂದಣ–ಚಿನ್ನ
,, ಪರುಂಜವ್ವನ–ಉಕ್ಕಿಬರುವ ಯೌವನ
೩೪ ನೆರೆ–ಚೆನ್ನಾಗಿ
೩೫ ತವಕ–ಕುತೂಹಲ, ಆಸೆ
೩೬ ತರಣಿ–ಸೂರ್ಯ
,, ಮಿರುಗುತಿಹ–ಪ್ರಕಾಶಿಸುತ್ತಿರುವ
,, ಇರವನು–ಸ್ಥಿತಿಯನ್ನು, ರೀತಿಯನ್ನು
,, ಇರದೆ–ನಿಲ್ಲದೆ
,, ಎಯ್ದಿದರು–ಹೋಗಿಸೇರಿದರು
೩೭ ದಂದುಗ–ವ್ಯಾಕುಲತೆ, ಕಳವಳ
,, ಸಂಧಿಸಲು–ಒದಗಲು
,, ಮಿಂದು–ಸ್ನಾನಮಾಡಿ
,, ಎಸಗಿ–ಮಾಡಿ
೩೮ ಎಯ್ತಂದು–ಬಂದು
,, ಕೈಕೊಳ್ಳುವುದು–ಅಂಗೀಕರಿಸಬೇಕು

ಪದ್ಯ ಸಂಖ್ಯೆ : ಪದಗಳು ಮತ್ತು ಅರ್ಥ

೩೯ ಸನಿಹ-ಹತ್ತಿರ
,, ಇಹ-ಇರುವ
೪೦ ಸೊಕ್ಕುಜವ್ವನೆ-ಕೊಬ್ಬಿದ ಯೌವನವುಳ್ಳವಳು
,, ಅಕ್ಕಟ-ಅಯ್ಯೋ
,, ಏಗೆಯ್ವೆನು-ಏನುಮಾಡಲಿ
,, ಕಕ್ಕುಲತೆ-ವ್ಯಾಕುಲತೆ
,, ಅಕ್ಕರು-ಪ್ರೀತಿ
,, ಮನದೊಳ್ಪೊಕ್ಕ-ಮನದಲ್ಲಿ ಸೇರಿರುವ
೪೧ ಅರಸುತಲಿ-ಹುಡುಕುತ್ತಾ
,, ಆಶಯ-ಅಭಿಪ್ರಾಯ
,, ಪಂಬಲು-ಹಂಬಲ
೪೨ ಆಹೆನು-ಆಗುವೆನು
,, ಅಳಿದ-ತೀರಿಹೋದ
,, ಸಲಹದ-ಕಾಪಾಡದ
೪೩ ಸೊಲ್ಲಿಸರು-ಹೇಳುವರು
,, ಬಲ್ಲ-ತಿಳಿದ
,, ತಕ್ಕ-ಯೋಗ್ಯವಾದ
,, ಬಹ-ಬರುವ
೪೪ ಇತ್ತು-ಕೊಟ್ಟು
,, ಬೀಳ್ಕೊಡಲು-ಅಪ್ಪಣೆಕೊಟ್ಟು ಕಳುಹಿಸಲು
೪೫ ಬಂತು-ಪಡೆದು
೪೬ ಎಡೆ-ಸ್ಥಳ, ಸ್ಥಾನ
,, ಅಗಣ್ಯವೆನಿಸಿ-ಲೆಕ್ಕಮಾಡುವುದಕ್ಕಾಗದಷ್ಟು
,, ಉದಗ್ರ-ಉನ್ನತ
,, ವರೇಣ್ಯ-ಶ್ರೇಷ್ಠ
,, ಲಾವಣ್ಯನಿಧಿ-ಸೌಂದರ್ಯದ ಕಾಂತಿಯುಕ್ತ

೨ನೆಯ ಆಶ್ವಾಸ

ಪದ್ಯ ಸಂಖ್ಯೆ : ಪದಗಳು ಮತ್ತು ಅರ್ಥ

ಸೂಚನೆ: ಅನುಮತ ಇಷ್ಟ

೧ ಆನಂದ-ಚೆಂದ
,, ಒಡ್ಡೋಲಗ-ಸಭೆ, ದರ್ಬಾರು
,, ನಲವಿಂದ-ಸಂತೋಷದಿಂದ
,, ಅಂಬರ ಆಕಾಶ
,, ನೀರದ-ಮೇಘ
೨ ಸತ್ಕರಿಸಿ-ಮರ್ಯಾದೆ ಮಾಡಿ
,, ಕಂಡುದರಿಂ-ಕಂಡುದರಿಂದ
೩ ಲೇಸು-ಶ್ರೇಯಸ್ಸು
೪ ಪರಸು-ಹರಸು
೫ ಅರುಹು-ತಿಳಿಸು
,, ಈಗಳೆ-ಈಗಲೇ
,, ಅನುರಾಗ-ಪ್ರೀತಿ
೬ ಸಂತಸ-ಸಂತೋಷ
೭ ಅನವರತ-ಯಾವಾಗಲೂ
೯ ಎಂದುಂ-ಯಾವಾಗಲೂ
೧೧ ಮೇಣ್ ಇನಿಸು ಮತ್ತು, ಸ್ವಲ್ಪವೂ
,, ಬೆಸಗೊಂಬೆನು ಕೇಳಿಕೊಳ್ಳುವೆನು
೧೪ ವಿಷಾದ ದುಃಖ
೧೫ ಅಳಿವನು-ಸಾಯುವನು
೧೬ ಬಗೆಯೆ-ಆಲೋಚಿಸಲು
,, ಮಗುಳೆ ಮತ್ತೆ
೧೭ ಒಮ್ಮೆ ಒಂದುಸಲ
,, ಮಾಳ್ಪುದು ಮಾಡುವುದು
೧೮ ಮೇದಿನಿ-ಪೃಥ್ವಿ, ಭೂಮಿ

ಪದ್ಯ ಸಂಖ್ಯೆ :   ಪದಗಳು ಮತ್ತು ಅರ್ಥ

೧೮ ಪಡಿ–ಸಮಾನ
೧೯ ಎನೆ–ಎಂದು ಹೇಳಲು
,, ಅನುಗೊಳಲಿ–ನೆರವೇರಲಿ
೨೦ ಚಳಕದಿಂದ–ಬೇಗನೆ

೩ನೆಯ ಆಶ್ವಾಸ

ಸೂಚನೆ : ಮುದದಿ–ಸಂತೋಷದಿಂದ

೧ ಮೇಳವಿಸಿ–ಸೇರಿಸಿ, ತೊಲಪಣ್ಣ–ಹೊರಟನು
೨ ಗಹನ–ಕಾಡು
,, ಯೋಗಧರ್ಮದಿ–ಯೋಗಿಯ ನಡತೆಯಿಂದ
೮ ಅಂತರಾಯ–ವಿಘ್ನ
೯ ನೆಲೆ–ಸ್ಥಿರತ್ವ
೧೧ ಒಲಿದು–ಒಪ್ಪಿ
,, ಅಳಲುವ–ದುಃಖಪಡುವ
೧೨ ಸಲಿಸಬೇಕು–ಪೂರ್ತಿಮಾಡಬೇಕು
೧೩ ಕೊಳುಕೊಡೆ–ಹೆಣ್ಣು ಕೊಟ್ಟು ತರುವುದು
,, ಎಳಸಿರುವೆನು–ಇಚ್ಛೈಸಿರುವೆನು
,, ಅಳವಡು–ಅನುಕೂಲಿಸು
೧೪ ಬಂಧುತೆ–ಬಂಧುತ್ವ, ನಂಟತನ
೧೫ ಘುಮ್ಮಿಡಿಸು–ಘುಮ್ಮೆಂದು ತುಂಬಿಕೊಳ್ಳು
೧೬ ಅನಿತು–ಅಷ್ಟು
೧೭ ಮುಡಿ–ತಲೆ
೧೮ ಅಲಸದೆ–ಬೇಸರಗೊಳ್ಳದೆ
೧೯ ಸ್ಮೃತಿ–ಜ್ಞಾಪಕ, ನೆನಪು
೨೦ ತಳರ್ವೆನು–ಹೊರಡುವೆನು
೨೨ ಉಡಿಗೆ–ಬಟ್ಟೆ
,, ತೊಡಿಗೆ–ಒಡವೆ

ಪದ್ಯ ಸಂಖ್ಯೆ : ಪದಗಳು ಮತ್ತು ಅರ್ಥ

೨೨ ಉರುತರದ-ಹೆಚ್ಚಾದ
೨೩ ಐಸಿರಿ-ಐಶ್ವರ್ಯ
೨೫ ಎಲೆವನೆ-ಪರ್ಣಶಾಲೆ, ಗುಡಿಸಲು
೨೬ ಡೊರೆತರೆ-ಸಿಕ್ಕಿದರೆ
೨೯ ಓಪ-ಪತಿ, ಗಂಡ
,, ಗೋಪನ-ಕಾಪಾಡುವಿಕೆ
೩೧ ಆಣತಿ ಆಜ್ಞೆ

೪ನೆಯ ಆಶ್ವಾಸ

ಸೂಚನೆ : ಏಣ ಲೋಚನೆ-ಜಿಂಕೆಯಹಾಗೆ ಚಂಚಲವಾದ ಕಣ್ಣುಳ್ಳವಳು

೧ ಇನ-ಪತಿ ; ಅಳಿವ-ಮರಣವನ್ನು
೨ ಎಸಗಲ್-ಮಾಡಲು
೩ ಆಪೆಯ-ಬಲ್ಲೆಯ, ಶಕ್ತಿಯುಂಟೆ
೪ ಬಿರುಬಿಸಲು-ವೇಗವಾದ ಬಿಸಿಲು
,, ಬೇಗೆಯುಪಟಳ-ತಾಪದ ಜೋರು
೬ ಹರಕೆ-ಆಶೀರ್ವಾದ
೮ ಅಳಲು ದುಃಖ
೯ ಪರಸು ಕೊಡಲಿ
,, ವಹಿಲದಲಿ ಬೇಗನೆ
,, ಪೆರಮಡಲು-ಹೊರಡಲು
೧೦ ಮಾಣದೆ-ಬೇಡವೆಂದು ಹೇಳದೆ
೧೧ ಮಿಹಿರ ಸೂರ್ಯ
೧೨ ಬಿರಿದು ಹೆಚ್ಚಾಗಿ
೧೩ ಓಸರಿಸಬೇಡ ಹಿಂಜರಿಯಬೇಡ
,, ಕಡೆಗಣಿಸಬೇಡ ತಿರಸ್ಕರಿಸಬೇಡ
೧೬ ಎಸೆವ ಹೇಳುವ
೧೯ ಅಣಿಯರದಿ ಹೆಚ್ಚಾಗಿ

ಪದ್ಯ ಸಂಖ್ಯೆ : **ಪದಗಳು ಮತ್ತು ಅರ್ಥ**

೧೯ ತಿಂತಿಣಿ-ಗುಂಪು

೨೦ ನಳನಳಿಪ-ಕೋಮಲವಾದ

,, ಬಗೆಗೊಳುವ-ಮನೋಹರವಾದ

೨೧ ಕಂಗೊಳಿಪ-ಕಣ್ಣನ್ನು ಸೆಳೆಯುವ, ಸೊಗಸಾದ

೫ನೆಯ ಆಶ್ವಾಸ

ಸೂಚನೆ : ಅಮಮ-ಆಶ್ಚರ್ಯ

೧ ಆಯಸ-ಆಯಾಸ, ಬಳಲಿಕೆ

೨ ಕರಾಳ ಕಾಲ-ಭಯಂಕರನಾದ ಯಮ

೩ ಸಾರೆ-ಹತ್ತಿರ

೪ ಘೇಲಿಸೆ-ಜೀಗನೆ

೬ ಮಹತಿ-ಮಹಿಮೆಯುಳ್ಳವಳು, ಪ್ರಾಜ್ಞಳು

,, ನಿಲೆಯ-ನಿಜಸ್ಥಿತಿಯನ್ನು

೭ ನನ್ನಿಯಿಂ ನಿಶ್ಚಯವಾಗಿ

೮ ಬಲುಹು-ಬಲಾತ್ಕಾರ

೧೦ ಮರುಗುತ-ದುಃಖಿಸುತ್ತ

,, ಬೆಂಬಳಿ-ಬೆನ್ನುಹಿಂದೆ

,, ಬರ್ಪಳನು ಬರುವವಳನ್ನು

೧೯ ನೆರವಿ-ಗುಂಪು

,, ಜೀವಿ-ಮನುಷ್ಯ

೨೨ ಧಾಮನಿಧಿಜ-ಸೂರ್ಯನ ಮಗ

೨೪ ಸೂರ-ಸೂರ್ಯ

೨೬ ಸಲ್ವುದು-ಒಪ್ಪುವುದು

೩೨ ಅಹವು-ಆಗುವುವು

೩೩ ಜವ-ಯಮ

೩೪ ಎಣಿಸನು-ಯೋಚಿಸುವುದಿಲ್ಲ

ಪದ್ಯ ಸಂಖ್ಯೆ : ಪದಗಳು ಮತ್ತು ಅರ್ಥ

೩೬ ಅರುಜ-ರೋಗವಿಲ್ಲದವನು

೬ನೆಯ ಆಶ್ವಾಸ

ಸೂಚನೆ : ಜವದಿಂ-ವೇಗವಾಗಿ
ಮಡದಿ ಹೆಂಡತಿ

೧ ಡಿಂಬ-ಶವ, ಮೈ
೨ ಅಂಕ ತೊಡೆ
೩ ಹದನ-ಸಂಗತಿ
,, ಕುದಿವರು-ಸಂಕಟಪಡುವರು
,, ಎಂತೋ-ಹೇಗೋ, ಎಷ್ಟೋ
೫ ಪುದಿದು-ಹರಡಿಕೊಂಡು, ತುಂಬಿ
೮ ತಳುವಿದರೆ-ತಡಮಾಡಿದರೆ
,, ಹಗರಣ-ಗದ್ದಲ, ಕೋಟಲೆ
,, ಅಳುಕುತ-ಹೆದರುತ್ತ
೯ ಬೇಗುದಿ ಸಂತಾಪ
೧೦ ದಂದುಗ-ದುಃಖ
೧೧ ಉಗುವ-ಉಕ್ಕಿ ಹರಿಯುವ
೧೩ ಉಳಿ-ಬಿಡು
೧೫ ಸವನಿಸಿ-ಸರಿಮಾಡಿ
೧೬ ಹತಿ-ಪೆಟ್ಟು
೧೮ ತವಕ ಆತುರ
,, ನಟ್ಟಿರುಳು ಮಧ್ಯರಾತ್ರಿ

೭ನೆಯ ಆಶ್ವಾಸ

ಸೂಚನೆ : ಬಾಳ್ವಳು-ಬಾಳಿದಳು

೨ ಪರಿಸರ-ಹತ್ತಿರ

ಪದ್ಯ ಸಂಖ್ಯೆ :   ಪದಗಳು ಮತ್ತು ಅರ್ಥ

೨   ಹಂಬಲಿಸಿ-ಹೆಚ್ಚಾಗಿ ದುಃಖಿಸಿ

೩

೬

೮

೯

,,

,,

,,

೧೧

೧೩

೧೮

೧೯

೨೧

,,

,,

೨೩

Printed by the Secretary, The Mysore Co-operative Printing Works Ltd., No. 3, Lal-Bagh Road, Bangalore 2.